


Karnataka Field Institutes March - 2015 Issue No.: 31

# ಬಯಲು Bayalu

*....a space of our own*



## Index

Table of Contents


1. **Born to fight *by Peri*** ...... 5
2. **ಪುಟ್ಟಮ್ಮನಿಂದ ಬಗೆಹರಿದ ವ್ಯಾಜ್ಯ: Litigation Solved through Puttamma *by Ramakrishna*** ...... 6
3. **ಅಲ್ಲಿಲ್ಲಿ.....................! Here and There *by Najivi*** ...... 7
4. प्रशंसा by Shivaji ...... 8
೫. ಭಾರತಾಂಬೆಯ ಮಗಳು: **Daughter of Bharatmata *by Hanumantha Raju*** ...... 8
6. **Women in ancient and modern India *by Rajesh*** ...... 8
7. **ಸ್ಫೂರ್ತಿ ತುಂಬಿದ ಭೇಟಿ: Motivation from Meeting *by Gopalakrishna*** ...... 10
8. **ಅಮ್ಮ: Mother *by Gundappa*** ...... 11
9. **ಅಪ್ಪ ಕೊಡಿಸಿದ ಅಂಗಿ ಮತ್ತು ನಾಟಕ ಶಾಲೆ: Shirt Gifted by my Father and the Drama School *by Sathya Sakshi Tumari*.** ...... 12

11. तेरे बंधन, मेरी पहचान?? ***By Rachana*** ...... 13

10. **Women or Human Being *by Randeep Kour*** ...... 16

12. ಯಾರು ನಾನು?: **Who am I *by Hareesh Shetty*** ...... 16

13. **Bus 101 *by Priyanka*** ...... 17

14. ಮನೆಗೆ ಬಂದಿಳಿದ ಮನದಾಳದ "ಗೌರಿ": **Gowri Coming Down from Heart to my House *by Shadakshari*** ...... 17

15. **A brief history of international women's day *by Rajesh*** ...... 20

16. ಮುನ್ನುಡಿಯೇ ದಿಕ್ಸೂಚಿಯಾಗಲಿ: **Let the introduction be a guiding post *by Punit*** ...... 21

17. ಛಲವೊಂದಿದ್ದರೆ!! : **If resolution could persist *by Divakar*** .......... ...... 22

18. Salutation to Womanhood ***by Rama Devi*** ...... 23

19. **Cool Clicks *by Anil Kudambal*** ...... 24

## **1.** Born to fight

- ***Peri***

I always wonder about the strength of these women whom I know. They are fighters. My mother who is fighting today for life in ICU had been a fighter since her very young days. She had to fight to go to school, she had to fight to postpone her marriage, she had to fight with her family to get married to my father. Later she had to fight to get her children good schooling. She fought for her share of the agricultural land.... She had to fight alone against all odds in the village during my father's stay in Bombay.... She fought for her brother and sisters and her husband and literally she had to fight for everything every day.

I was stunned when I got the New Year wishes on 1st of January from Husainabi who knew that her days were numbered. She knew she would die but her spirit was beyond all fears, very optimistic and high. Her positive attitude was infectiousness. What a fighter was she!

I was completely exhausted after interviewing 15 volunteers for the women literacy program. These were young girls who had dropped out of schools or colleges. Each member had to fight for education with their own family members, their neighbors, their village community and with every one they encountered. Thy were stopped from going to school for all sorts of reasons, their schools were far from the village, there were no other girls going from their village, the schools did not have a toilet, a new sibling was arriving in the family, any small one in the village was required for work in the field, their fathers were drunkards and drained whatever little income came their way, mothers were sick and matured sisters waiting to be married could not be left alone.... All sorts of reasons could come on their way. It was shocking to hear their stories of fighting to move each step forward.

The tribal women have another story to tell. The condition of the tribes today are pathetic and it is the women who bear the brunt of the situation. The exploitation of the women folk is very acute there. The forest department personnel, the mainland non-tribal men exploit them the most. The situation has resulted in making the tribal men powerless and it is these women who hold together the family and move forward. It is they who fight the forest dept, it is they who see hope in the education of their children, it is they who motivate their men to move out of the forest and dream of starting a new life in the city.




I have seen very closely how the women of the slums have to live. Such miserable condition and what an unsafe and insecure place. They do most of the menial job for survival. In most of the cases for the slum woman, husband is just a shield to protect her from multiple exploitation. She tolerates this exploitation of one person in place of being exploited by many in multiple ways. Unhealthy living condition and meagre income makes her life miserable. She has to be alert 24 x7. A minute of relaxing can cause huge damage to her family. What a way to live!

What is fascinating to me is that these women with such miserable condition along with their fight enjoy their life and make life worth living to their family. How that is possible is a mystery to me. There is laughter and joy in their life, there is humor and wit. There is song and dance. There is color and celebration. More than any other thing there is dream. The dream of these communities are nurtured by these women. I bow to these women who have to fight for their basic survival but, have the courage and resilience to dream and thus nurture the dream of the community… the civilization!

## 2. ಪುಟ್ಟಮ್ಮನಿಂದ ಬಗೆಹರಿದ ವ್ಯಾಜ್ಯ

– *ರಾಮಕೃಷ್ಣ*



**(ಇದು ಪುಟ್ಟ ಕತೆಯ ೩ನೆ ಭಾಗ. ಭಾಗ ೨ ಹಿಂದಿನ ಸಂಚಿಕೆಯಲ್ಲಿ ಇದೆ.)**

ಶಾಲೆಗೆ ಹೋಗುತ್ತ ಹೋಗುತ್ತ ಪುಟ್ಟಮ್ಮನಿಗೆ ಎಲ್ಲರು ಸ್ನೇಹಿತರಾದರು. ಅಂತವರಲ್ಲಿ ಅರ್ಚಕರ ಮನೆಯ ಜಾನಕಿಯೂ ಒಬ್ಬಳು.

ಆಚೆಕರೆ ಅವಳಪ್ಪನ ದಾಯಾದಿಗಳ ಮನೆ. ಅಜ್ಜನ ಕಾಲಕ್ಕೆ ಸುರುವಾದ ಮನೆ ಒಳಗಿನ ಜಗಳ ಆಸ್ತಿ ಕಲಹವಾಗಿ ಮನೆ ಎರಡಾಗಿತ್ತು. ಕೋರ್ಟಿನಲ್ಲಿ ವ್ಯಾಜ್ಯ ಹೂಡಿಕೊಂಡಿದ್ದರು. ಎರಡೂ ಮನೆಯವರೂ ಪರಸ್ಪರ ಮಾತಾಡುತ್ತಿರಲಿಲ್ಲ. ಒಬ್ಬರು ಇನ್ನೊಬ್ಬರ ಮುಖವೂ ನೋಡುತ್ತಿರಲಿಲ್ಲ. ಆಣೆಭಾಷೆ ಆಗಿದೆ ಅನ್ನುತ್ತಿದ್ದರು. ಪರಸ್ಪರ ಇದ್ದೂ ಇಲ್ಲದ ಹಾಗೆ ಇರುತ್ತಿದ್ದರು.

ಕೋರ್ಟ್‌ನಲ್ಲಿ ಇದ್ದ ವ್ಯಾಜ್ಯ ಬಗೆಹರಿಯದೆ ಮುಂದೆಮುಂದಕ್ಕೆ ಹೋಗುತ್ತಿತ್ತು. ಅದರ ಜೊತೆ ಜಿದ್ದಾಜಿದ್ದಿಯೂ ಮನಸ್ಸಿನ ಕಹಿಯೂ ಹೆಚ್ಚುತ್ತಿತ್ತು. ಪರಸ್ಪರ ಆಗದಂತೆ ಇದ್ದರು ಇನ್ನೊಬ್ಬರಿಗೆ ಬರುವ ಸಂಕಷ್ಟ ಮತ್ತು ದುರಂತಗಳನ್ನು ನೋಡಿ 'ಅನ್ಯಾಯಕ್ಕೆ ಹಾಗೆಯೆ ಆಗುವುದು' ಎಂಬ ಗಹನವಾದ ಚರ್ಚೆ ಎರಡೂ ಮನೆಗಳಲ್ಲಿ ನಡೆಯುತ್ತಿತ್ತು! 'ನಮಗೆ ಕೋಪ' ಎನ್ನುವಷ್ಟು ಪುಟ್ಟಮ್ಮನಿಗೆ ತಿಳಿದಿತ್ತು. ಕೋಪ ಎಂದರೆ ಮಾತಾಡದೆ ಇರುವುದು ಎಂಬಷ್ಟು ತಿಳಿದಿತ್ತು. ಕೋಪ ರಾಜಿಯಾಗುವುದಕ್ಕೆ ಅಡ್ಡಿ ಅಂತ ಅವಳಿಗೇನು ಇರಲಿಲ್ಲ. ಅವಳಿಗೆ ಎಂತ ಬೇಗುದಿಯೂ ಇರಲಿಲ್ಲ.

ಎರಡೂ ಮನೆಯ ದಾರಿ ಒಂದೆಡೆ ಸೇರಿ ಮುಂದೆ ಶಾಲೆಗೆ ಹೋಗುವುದಕ್ಕೆ ಒಂದೆ ಆಗಿತ್ತು. ಅಲ್ಲಿಂದ ಮುಂದಕ್ಕೆ ಇಬ್ಬರೂ ಒಟ್ಟಿಗೆ ಹೋಗುವ ಹಾಗೆ ಇತ್ತು. ಮೊದಮೊದಲಿಗೆ ಇಬ್ಬರಿಗು ಒಬ್ಬರನ್ನೊಬ್ಬರು ನೋಡುವುದಕ್ಕೆ ಸಂಕೋಚವೆನಿಸುತ್ತಿತ್ತು. ಅವಳು ಮುಡಿದು ಬರುವ ಬಗೆಬಗೆಯ ಹೂವುಗಳನ್ನೂ, ಹೂಮಾಲೆಗಳನ್ನೂ ಕಂಡು ಪುಟ್ಟಮ್ಮನಿಗೆ ಮಾತಾಡಿಸುವ ಅನಿಸುತ್ತಿತ್ತು. ಪುಟ್ಟಮ್ಮನ ಬಟ್ಟೆಬರೆ ಶುಭ್ರವಾಗಿ ಯಾವುದೋ ಸೋಪಿನ ಗಮವನ್ನು ಬೀರುವಾಗ ಜಾನಕಿಗು ವಿಶೇಷ ಅನಿಸುತ್ತಿತ್ತು.

ಕ್ರಮೇಣ ಇಬ್ಬರೂ ಒಬ್ಬೊಬ್ಬರ ಮುಖ ನೋಡುತ್ತ, ಪರಸ್ಪರ ಮೆಚ್ಚುತ್ತ, ಸಂಕೋಚ ಬಿಟ್ಟುಕೊಡುತ್ತ, ಮುಗಳ್ನಗುತ್ತ ಗೆಳತಿಯರಾದರು. ಜಾನಕಿಯ ಮಾತು ಅವಳಿಗೆ ಒಳ್ಳೆಯದೆನಿಸುತ್ತಿತ್ತು. ಅವಳ ಮಾತಿನಲ್ಲಿ ತುಂಬಾ ವಿಷಯಗಳಿರುತ್ತಿದ್ದವು. ಅವಳ ಜೊತೆ ಮಾತುಕತೆಯಾದರೆ ಅವಳು ಹೇಳದೆ ಉಳಿದಿರುವುದು ಯಾವುದು ಇಲ್ಲ ಅನಿಸುತ್ತಿತ್ತು. ಅವಳ ಮಾತಿನಲ್ಲಿ ಒಂದು ಸಹಜ ರಾಗವೂ ವೈಯ್ಯಾರವೂ ಇದ್ದು ಕೇಳುವುದಕ್ಕೆ ಅಪ್ಯಾಯವಾಗುತ್ತಿತ್ತು.

ಪುಟ್ಟಮ್ಮನಿಗೆ ತನ್ನ ಮನೆಯ ಎಲ್ಲಾ ಸಂಗತಿಯನ್ನು ಜಾನಕಿಯ ಹತ್ತಿರ ಹೇಳಿಕೊಳ್ಳುವುದಕ್ಕೆ ಸರಾಗವಾಗುತ್ತಿತ್ತು. ಅವರ ಪರಿಚಯವಾದ ಒಂದೆರಡು ದಿನಗಳಲ್ಲೆ ಜಾನಕಿ, 'ನೀನು ಒಳ್ಳೆಯೋಳು ಅಂತ ಅಮ್ಮನಿಗೆ ಹೇಳಿದೆ. ನೀನು ನಂಗೆ ಅಕ್ಕ ಆಗ್ಬೇಕಂತೆ. ಪುಟ್ಟಕ್ಕ ಅಂತೆ' ಅಂದಳು. ಇವಳು ನನ್ನ ಪುಟ್ಟಕ್ಕ ಅಂತ ಶಾಲೆಯಲ್ಲಿ ಕರೆದರೆ ಅಂತ ಕಸಿವಿಸಿ ಆಯಿತು. ಆದರೆ ಜಾನಕಿ ಸೂಕ್ಷ್ಮಮತಿಯಿದ್ದಳು. ಸಹಜವಾದ ಒಳ್ಳೆತನವೂ ಅವಳಲ್ಲಿತ್ತು. ಅವಳು ಟೀಚರ್ ಅಥವಾ ಸಹಪಾಠಿಗಳಿದ್ದಾಗ 'ಅವನಿ' ಅಂತಲೆ ಕರೆದು, ಪುಟ್ಟಮ್ಮ ಒಬ್ಬಳೆ ಇದ್ದು ಅವಳ ಕೈಹಿಡಿದು ಮಾತಾಡುವಾಗ ಮಾತ್ರ 'ಪುಟ್ಟಕ್ಕ' ಅನ್ನುತ್ತಿದ್ದಳು. ಇದಂತು ಪುಟ್ಟಮ್ಮನಿಗೆ ವಿಶೇಷವಾದ ಅಕ್ಕರೆಗೆ ಕಾರಣವಾಗಿತ್ತು.

ಅವರು ಮನೆಯಿಂದ ಬಂದು ದಾರಿ ಒಟ್ಟಾಗುವಲ್ಲಿ ಒಂದು ಪುಟ್ಟ ಪಾದೆಕಲ್ಲು ಹಾಸಿಕೊಂಡಿತ್ತು. ಅದರಲ್ಲೆ ಒಬ್ಬರು ಕಾಲುಚಾಚಿ ಕೂತು ಇನ್ನೊಬ್ಬರ ಬರವನ್ನು ಕಾಯುತ್ತಿದ್ದರು. ಸಂಜೆ ಮನೆಗೆ ಹೋಗುವುದಕ್ಕೆ ಬೇರ್ಪಡುವ ಮೊದಲೂ ಅಲ್ಲಿ ಕೂತೆ ಅಗಲುತ್ತಿದ್ದರು. ಇವರ ಅನ್ಯೋನ್ಯತೆ ಇಬ್ಬರು ಮನೆಯವರಿಗು ಕಂಡಿತು. 'ಆಗದವರ ಜೊತೆ ಯಾಕೆ ಸ್ನೇಹ' ಎಂದರು, 'ಮನೆಯಲ್ಲಿ ದೊಡ್ಡವರಿಗೆ ಆಗದ್ದನ್ನು ಯಾಕೆ ಮಾಡುತ್ತೀರಿ', ಅಂತಲೂ ಹೇಳಿ ನೋಡಿದರು. 'ನೀವು ಸಣ್ಣವರು. ಮನೆಯವರೆಲ್ಲ ಹೇಗಿರುತ್ತಾರೆ ಹಾಗೆ ಇರಬೇಕು' ಅಂತ ಮಧ್ಯೆಮಧ್ಯೆ ಹೇಳಿದರು. 'ಏನಾದರು ಕೆಟ್ಟದಾದರೆ ಮುಂದೆ ನೀವೆ ಅನುಭವಿಸಬೇಕು' ಅಂತಲೂ ಹೆದರಿಸಿದರು. ಯಾವುದೂ ಅವರು ಸಹಜವಾಗಿರುವ ರೀತಿಯನ್ನು ಬಾಧಿಸಲಿಲ್ಲ. ಬದಲಾಗಿ ಅವರ ರೀತಿ ಮನೆಯವರನ್ನೆ ಅಲ್ಲಾಡಿಸತೊಡಗಿತು.

ಜಾನಕಿ ಮನೆಯ ಹೂವಿನ ಪಾಲು ಪುಟ್ಟಮ್ಮನಿಗೆ ಸಿಕ್ಕಿತು. ಪುಟ್ಟಮ್ಮ ಮೆಲ್ಲಗೆ ಉಪ್ಪಿನಕಾಯಿ ಚೀಪುವುದಕ್ಕೆ ಅಂತ ಬಾಳೆಲೆಯಲ್ಲಿ ಸುತ್ತಿಸಿಕೊಂಡು ತಂದು ಜಾನಕಿ ಜೊತೆ ಹಂಚಿಕೊಂಡಳು. ಕ್ರಮೇಣ ಪುಟ್ಟಮ್ಮ ಪಾದೆ ಕಲ್ಲಿನಲ್ಲಿ ಕೂತು ಕಾಯುವ ಬದಲಿಗೆ ಜಾನಕಿಯ ಪುಟ್ಟ ಮನೆಯ ಅಂಗಳದ ತುದಿಗೆ ಹೋಗಿ 'ಜಾನಕಕ್ಕ, ನಿನಗೆ ಹೊರಟಾಯಿತಾ' ಅಂತ ಕೂಗಿ ಕೇಳತೊಡಗಿದಳು. ಅವಳಮ್ಮ ಪುಟ್ಟಮ್ಮನ ಬಳಿಗೇ ಬಂದು ಹೂಮುಡಿಸಿ ಕಳಿಸತೊಡಗಿದರು. ರಜಾ ದಿನವಾದರೆ ಜಾನಕಿ ಆ ಎರಡೂ ಮನೆಗಳ ತೋಟದ ಮಧ್ಯೆ ಉದ್ದಕ್ಕಿದ್ದ ಬೇಲಿಯ ಅಂಚಿಗೆ ಬಂದು ಎತ್ತರದಲ್ಲಿ ದೊಡ್ಡದಾಗಿದ್ದ ಮನೆಯಂಗಳದಲ್ಲಿ ಯಾರಾದರು ಸುಳಿದಾರೆ ಕಾದು 'ಪುಟ್ಟಕ್ಕಾ ಪುಟ್ಟಕ್ಕಾ...... ಬರ್ತಿಯಾ' ಅಂತ ಕೂಗಿ ಕರೆಯತೊಡಗಿದಳು. ಪುಟ್ಟಮ್ಮನ ಅಮ್ಮನೂ, 'ಜಾನಕಿಗೆ ಕೊಡು' ಅಂತ ಅದುಇದು ಕೈಯಲ್ಲಿರಿಸಿ ಕಳಿಸತೊಡಗಿದರು.

ಪುಟ್ಟಕ್ಕನಿಗೆ ಜಾನಕಿ ಮನೆಯ ಅಂಗಳಕ್ಕೆ ಹೋಗಿ ಮನೆಗೂ ಹೋದರೆ ಏನೆಲ್ಲ ಇರಬಹುದು, ಅವಳಮ್ಮ ನೆಟ್ಟ ಗಿಡಗಳು ಎಲ್ಲೆಲ್ಲಿ ಇವೆ' ಅಂತ ಯಾವತ್ತಿಂದಲು ಕುತೂಹಲ. ಜಾನಕಿಗೆ ಬೇಲಿಯ ಆಕಡೆ ಇರುವ, ಯಾವಾಗೆಂದರು ಪುಟ್ಟಕ್ಕ  ತಂದುಕೊಡುವ ಹುಳಿ ನಾಯಿಕಿತ್ತಲೆ ಮರವನ್ನು ಹತ್ತಿರಹೋಗಿ ನೋಡುವ ಒಳೊಳಗಿನ ಆಸೆ. ಬರುಬರುತ್ತಾ ಎರಡೂ ಮನೆಯ ಹಠಮಾರಿ ಗಂಡಸರಲ್ಲು ಮಕ್ಕಳ ಹಂಬಲಕ್ಕೆ ಸ್ಪಂದಿಸುವ ಗುಣ ಬೆಳೆಯತೊಡಗಿತು.

ಇದಕ್ಕೆ ಇಂಬಾಗುವಂತೆ ಅಜ್ಜಿ ಒಂದು ದಿವಸ, 'ಜಾನಕಿಯ ಅಮ್ಮ ಮೊದಲಿಂದಲೂ ಒಳ್ಳೆಯೋಳು' ಅಂದರು. ಮತ್ತೆ ಆಗೊಮ್ಮೆ ಈಗೊಮ್ಮೆ, 'ಗಂಡುಮಕ್ಕಳ ಹಗೆಗೆ ಒಟ್ಟಿಗೆ ಇದ್ದವರು ಬೇರೆಬೇರೆ ಆದ್ದಾಯ್ತು. ನಾನಿರುವಾಗಲೆ ಒಳ್ಳೆಯದು ಮಾಡಿಕೊಳ್ಳಿ' ಅನ್ನತೊಡಗಿದರು. ಪುಟ್ಟಕ್ಕ ಜಾನಕಿ ಹತ್ತಿರ, 'ನಮಗೆ ಜಗಳ ಇರಬಾರದಂತೆ, ಅಜ್ಜಿ ಅದನ್ನೆ ಹೇಳುವುದು' ಅಂತ ಜಾನಕಿಯ ಕಿವಿಯಲ್ಲಿ ಖುಶಿಯಿಂದ ಹೇಳಿದಳು.

ನೀರುಗೊಬ್ಬರ ಹಾಕಿದ ಗಿಡ ಬೆಳೆಯುವ ರೀತಿ ಸದಾಶಯ ಚಿಗುರಿ ಮರವಾಗತೊಡಗಿತು. ಆಮೇಲೆ ಒಂದೆರಡು ವರ್ಷಗಳಲ್ಲೆ ರಾಜಿಪಂಚಾಯ್ತಿ ನಡೆದು, ಕೊಡುವುದು ಬಿಡುವುದು ಆಗಿ, ಹುಳಿ ನಾಯಿಕಿತ್ತಲೆ ಮರದ ತೋಟ ಜಾನಕಿ ಮನೆಗೂ, ಮಕ್ಕಳ ಪಾದೆಯ ಪಡ್ಪು ಪುಟ್ಟಮ್ಮನವರಿಗೂ ಎಂದಾಯ್ತು. ತಾವು ನಿತ್ಯವೂ ಕೊಟ್ಟುಕೊಳ್ಳುವಂತೆ ಇದು ಸಹಿತ ಚೆನ್ನಾದ್ದು ಎಂಬಂತೆ ಅವರಿಬ್ಬರು ಇದ್ದರು.


ಅಲ್ಲಿಂದ ಪುಟ್ಟಮ್ಮನಿಗೆ ಜಾನಕಿ ಮನೆಯ ಮೂಲೆಮೂಲೆಯೂ ತನ್ನದು ಎಂಬಂತಾಯ್ತು. ಜಾನಕಿ ಯಾವಾಗೆಂದರೆ ಆವಾಗ ಪುಟ್ಟಕ್ಕನ ಮನೆಯಲ್ಲಿ ಇರುವ ಹಾಗಾಯ್ತು. ಆಗ ಇಬ್ಬರೂ ಐದನೆ ಕ್ಲಾಸಿಗೆ ಬಂದಿದ್ದರು.

## 3. ಅಲ್ಲಿಲ್ಲಿ....................!

**ನಾಜೀವಿ**

**ತುಣುಕು ೦೧**

ಕಡ್ಲೆಕಾಯಿ ...ಕಳ್ಳೇಕಾಯಿ...... ಬಿಸಿ ಬಿಸಿ ಬೇಯಿಸಿದ ಕಳ್ಳೇಕಾಯಿ...... ಅರೆ! ಇದು ನಾನು ಪ್ರತಿ ನಿತ್ಯ ಕೇಳುವ ಪರಿಚಿತ ಧ್ವನಿಯಲ್ಲವೇ? ಮಂಡ್ಯ ರೈಲ್ವೇ ಸ್ಟೇಶನ್ನಿನ ಮೂಲೆಯೊಂದರಲ್ಲಿ ಕುಳಿತು ಕಡ್ಲೆಕಾಯಿ ಮಾರುವ ಹಣ್ಣು ಹಣ್ಣು ಮುದುಕಿಯದ್ದು.



ಅವತ್ತು ಟ್ರೈನ್ ಒಂದು ಗಂಟೆ ಲೇಟು ಆ ಕಾರಣಕ್ಕಾಗಿಯೇ ಏನೋ ಅವರೊಂದಿಗೆ ನಾನು ಮಾತಿಗೆ ಇಳಿದಿದ್ದು, ಬಹುಶಃ ನಾನು ಅವತ್ತು ಅವರೊಂದಿಗೆ ಮಾತಿಗೆ ಇಳಿಯದಿದ್ದರೆ ಇದನ್ನ ಬರೆಯಲಿಕ್ಕೆ ಆಗುತ್ತಿರಲಿಲ್ಲವೇನೋ. ಅವಳೋ ಕಡ್ಲೆಕಾಯಿ ಮಾರಾಟದೊಂದಿಗೆಯೇ ತನ್ನ ಕಥೆ ಹೇಳಿಕೊಳ್ಳುತ್ತಿದ್ದಳು.

ಅವರ ಕಥೆ ಬಾದರಾಯಣ ಸಂಬಂಧದಂತೆ ಇದ್ದರು ನಾನು ಅರ್ಥೈಸಿಕೊಂಡದ್ದು ಹೀಗೆ...........
ಅಜ್ಜಿಗೆ ಮೂರುಮಕ್ಕಳು. ಒಬ್ಬಳಿಗೆ ಮುದುವೆ ಮಾಡಿಕೊಟ್ಟದ್ದಾಗಿದೆ, ಇನ್ನಿಬ್ಬರು ಗಂಡುಮಕ್ಕಳು ಅವರಲ್ಲಿ ಒಬ್ಬ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಕ್ಯಾಶಿಯರ್, ಇನ್ನೊಬ್ಬ ಕಾರ್ ಡ್ರೈವರ್ ಇಬ್ಬರಿಗೂ ಮದುವೆಯಾಗಿ ಮಕ್ಕಳಾಗಿವೆ.

ಈ ಅಜ್ಜಿಯ ಮಕ್ಕಳಿಗೆ ಅಪ್ಪ ತೀರಿದಂದಿನಿಂದಲೂ ಅಮ್ಮ ತಮ್ಮನ್ನು ಸಾಕಿ ಸಲಹಿದ್ದಾರೆ. ಎಂಬ ಅಪಾರ ಗೌರವವು ಇದೆಯಂತೆ, ಇಬ್ಬರು ಸೊಸೆಯರು ಸ್ವಂತ ಅಮ್ಮನಂತೆ ನೋಡಿಕೊಳ್ಳುತ್ತಾರೆ ಅಂತೆ' ಈ ಅಜ್ಜಿಗಂತು ನಾನು ಕಂಡ ಹಾಗೆ ಯಾವ ಕಾಯಿಲೆಯೂ ಹತ್ತಿರ ಸುಳಿದಿರಲಿಕ್ಕೆ ಇಲ್ಲ.

ಇಷ್ಟೆಲ್ಲಾ ಇದ್ದು ಅಜ್ಜಿಗೇಕೆ ಈ ಕೆಲಸ ಅಲ್ಲವೇ? ನನ್ನದ್ದೂ ಅದೇ ಪ್ರಶ್ನೆ? ಅಜ್ಜಿ ಕೊಟ್ಟ ಉತ್ತರ ಮಾತ್ರ ನನ್ನನ್ನು ದಂಗು ಬಡಿಸಿತ್ತು. "ನಾನು ಚಿಕ್ಕವಳಿದ್ದಾಗಲೇ ಮದುವೆಯಾಯಿತು ಓದು ಬರಹ ಕಾಣಲಿಲ್ಲ, ನಾನು ನಮ್ಮನೆಯವರಿಂದಲೇ ಒಂದಿಷ್ಟು ಲೆಕ್ಕ ಅಂತ ಕಲಿತಿದ್ದು, ನಮ್ಮ ಯಜಮಾನ್ರು ತುಂಬ ಬುದ್ಧಿವಂತರು ಅದರೆ ಏನು ಮಾಡುವುದು ಅವರನ್ನು ದೇವರು ಬೇಗ ಕರೆಸಿಕೊಂಡು ಬಿಟ್ಟ, ಜೀವನಕ್ಕೆ ಅವರ ಪಾಲಿಗೆ ಬಂದ ಜಮೀನನ್ನು ಗೇಣಿಗೆ ಕೊಟ್ಟು ನಾನು ಕಡಲೇಕಾಯಿ ವ್ಯಾಪರದಲ್ಲಿ ತೊಡಗಿದೆ. ಹೇಗೋ ಮಕ್ಕಳು ನಾನು ಹೊಂದಿಸಿದ ಹಣದಲ್ಲಿಯೆ ಓದಿ ದೊಡ್ಡವರಾದರು. ಈಗ ಅವರವರು ಅವರ ಕಾಲಮೇಲೆ ನಿಂತಿದ್ದಾರೆ. ಆದರೆ ನನಗೇನೋ ಹಿಂದಿನಿಂದ ಹೀಗೆಯೇ ಕೆಲಸ ಮಾಡಿಕೊಂಡು ಬಂದು ರೂಢಿ, ಈಗಲೂ ಅದನ್ನೇ ಮುಂದುವರೆಸಿಕೊಂಡು ಹೋಗುವ ಆಸೆ. ಬಂದ ಹಣದಿಂದ ಮೊಮ್ಮಕ್ಕಳಿಗೂ ಸೊಸೆಯಂದಿರಿಗೂ ಅದು ಇದು ತೆಗದುಕೊಡುತ್ತೇನೆ ಉಳಿದಿದ್ದು ನನ್ನ ಖರ್ಚಿಗೆ.........

ಹೌದು ಈ ಮಟ್ಟಿನ ಸ್ವಾವಲಂಭಿತನ ನಮಗೆ ಅಂಟುವುದು ಯಾವಾಗ? ಪಾರ್ಕು, ಟೀವಿ ಸಿರಿಯಲ್ಲು, ಪಕ್ಕದ ಮನೆಯರೊಂದಿಗೆ ಕಾಡು ಹರಟೆ ಬಿಡುವುದು ಯಾವಾಗ? ಹಾಗಂತ ನಾವು ಮಾಡುವುದದಾರು ಏನು? ಕಡ್ಲೆಕಾಯಿ ಮಾರುವುದಕ್ಕೆ ಸಾದ್ಯವೇ? .................. ಯೋಚಿಸೋಣವೆ?.........

ತುಣುಕು ೦೨–

ನಾನು ರಾಮಕೃಷ್ಣ ಆಶ್ರಮದಲ್ಲಿದ್ದಾಗ ಸ್ವಾಮಿ ಬ್ರಹ್ಮನಂದರು ನಮ್ಮ ಕಾಲೇಜಿನ ಅಧ್ಯಕ್ಷರಾಗಿದ್ದರು. ಅವರ ವಾಕ್‌ಪಟುತ್ವಕ್ಕೆ ಮಾರು ಹೋಗದವರೇ ಇರಲ್ಲಿಲ್ಲ ಬಿಡಿ. ಅವರಾಡುತ್ತಿದ್ದ ಮಾತುಗಳು ಮನಸ್ಸಿನಲ್ಲಿ ಬಾಣದಂತೆ ಸರಾಗವಾಗಿ ಇಳಿದು ಹೋಗುತ್ತಿದ್ದವು. ದಿನವೂ ಊಟವಾದ ಮೇಲೆ ಅವರೊಂದಿಗಿನ ಮಾತುಕತೆ ನೂರು ಪುಸ್ತಕದ ಸಾರದಂತೆಯೇ ಇರುತ್ತಿದ್ದವು. ಪ್ರಕೃತಿ ಬಗೆಗಿನ ಅವರ ಒಳನೋಟವಂತು ಅದ್ಭುತವೇ ಸರಿ ಎನ್ನಿ.....

ರಾತ್ರಿ ಹನ್ನೆರಡು ಗಂಟೆಗೆ ಯಾರೋ ರೂಮಿನ ಬಾಗಿಲು ಬಡಿದಂತಾಯಿತು. ಹೊರಗೆ ಬಂದು ನೋಡಿದರೆ ಸ್ವಾಮಿಗಳು ಟಾರ್ಚ್ ಹಿಡಿದು ನಿಂತಿದ್ದರು. ಬಾರೋ ನಿನಗೊಂದು ಅದ್ಭುತ ತೋರಿಸ್ತಿನಿ ಅಂದರು. ಈ ಸರಿ ರಾತ್ರಿಯಲ್ಲಿ ಕಾಡಿನಂತಿರುವ ಈ ಆಶ್ರಮದಲ್ಲಿ ನೋಡುವುದಕ್ಕೆ ಏನಿದೆ. ಈ ಸ್ವಾಮಿಗಳಿಗೆ ಬೇರೆ ಕೆಲಸವಿಲ್ಲ. ಎಂದು ಮನಸ್ಸಿನಲ್ಲಿ ಬೈದುಕೊಂಡೇ ಅವರ ಹಿಂದೆ ಹೊರಟೆ.

ಆಶ್ರಮದ ಹಿಂದಿನ ಕೊಳದ ಹತ್ತಿರ ಕರೆದೊಯ್ದು ಆಗಿನ್ನೂ ಅರಳಿದ ದೊಡ್ಡ ಹೂವನ್ನು ತೋರಿಸಿದರು. ನಾನು ಜೀವಮಾನದಲ್ಲಿ ಈ ತರಹದ ರಾತ್ರಿ ಅರಳುವ ಹೂವೊಂದನ್ನು ನೋಡಿರಲ್ಲಿಲ್ಲ ಬಿಡಿ. ಸ್ವಾಮಿಗಳೇ ಮುಂದುವರೆದು ಹೇಳಿದರು. ಈ ಹೂವು ಹನ್ನೆರಡು ವರ್ಷಕೊಮ್ಮೆ ರಾತ್ರಿ ವೇಳೆಯಲ್ಲಿ ಅರಳುತ್ತದೆ ಇದರ ಸುವಾಸನೆ ಸುಮಾರು ೧೦೦ ಮೀಟರ್‌ವರೆಗೂ ಹರಡಿರುತ್ತದೆ ಈ ಹೂವಿನ ಮೂಲ ಯಾವ ರಾಷ್ಟ್ರ? ಇದು ಇಲ್ಲಿಗೆ ಹೇಗೆ ಬಂತು? ಇದರ ಔಷದಿಯ ಗುಣವೇನು? ಹೀಗೆ ಸುಮಾರು ಅರ್ಧಗಂಟೆಗಳ ಕಾಲ ಆ ಹೂವಿನ ಬಗ್ಗೆ ಮಾತನಾಡಿದರು. ಆಗ ಅವರ ಮುಖದಲ್ಲಿದ್ದ ಆನಂದ ನನಗೊಂದು ಜೀವನಪಾಠ ಕಲಿಸಿತೇನೋ............

ಖುಷಿಪಡುವುದಕ್ಕೆ ವಸ್ತುವಿನ ಗಾತ್ರ ಅಥವಾ ಬೆಲೆ ಮುಖ್ಯ ಅಲ್ಲ, ಬದಲಿಗೆ ಬೇಕಾದ್ದು ಆನಂದಿಸುವ ಮನಸ್ಸು ಅಲ್ಲವೇ?

## 4. प्रशंसा

- बिरादार शिवाजी

(जाड़ों के दिन में रामू और लिंगम स्कूल जाते हैं जो कि वह उनके घर से कुछ मिनट की दूरी पर है, दोनों के बीच का संभाषण)

लिंगम : आज सुबह मैंने दाल-भात खाया ।

रामू : मैंने भी आज रात का दाल-भात खाया।

लिंगम : आज मेरी माँ ने बहुत अछा दाल-भात बनाया था, खास कर दाल बहुत बढ़िया थी।
मेरा दाल-भात खाने का बहुत मन कर रहा था| मैंने पेट भर खाया|

रामू : यार मेरा उतना खाने का मन नहीं कर रहा था| फिर भी माँ पूछ रही थी, थोड़ा और ले लो बेटा, पर मैंने नहीं लिया| मुझे अछा नहीं लग रहा था इसलिए मैंने माँ को मना कर दिया।

लिंगम : दोस्त तुझे माँ से ऐसा नहीं कहना चाहिए था| क्योंकि माँ को बुरा भी लग सकता है|

(और इतने में वे स्कूल पहुँच जाते हैं, प्रार्थना होने के बाद क्लास में दोनों का संभाषण)

सभी बच्चे एक साथ : नमस्ते गुरू जी।

गुरुजी : नमस्कार बच्चों| बैठिए|

(गुरुजी हाजिरी लेते हुये न 1 राधा 2 भीमन्ना 3 रामू ... आगे हाजिरी लेते हुये )

गुरुजी : बच्चों हम कल के अपने पढ़े हुए पाठ को थोड़ा सा याद करें ?

एक साथ : जी गुरुजी।

गुरुजी : तो पहले कौन बताएगा कि कल हमने क्या पढ़ा था?
रामू : गुरुजी मैं|
गुरू जी : शाबास बच्चे ! बताओ |
रामू : कल के पाठ का नाम था, प्रशंसा|
रामू : गुरूजी हमें किसी की प्रशंसा क्यों करनी चाहिए?



गुरुजी : कोई बच्चा बताएगा रामू के इस प्रश्न का उत्तर?
(गुरुजी थोड़ी देर प्रतीक्षा करने के बाद खुद ही बताने लगते हैं।)
गुरुजी : बच्चों आप यहाँ रोज आते हो ठीक है।
एक साथ : जी गुरू जी |

गुरुजी : मैं आपसे एक प्रश्न पुंछता हूँ की आप की माँ रोज दाल/सब्जी बनाती हैं| कितने साल से जब तुम पैदा भी नहीं हुए थे या जब से वह तुम्हारी माँ हैं तब से, ठीक है न?
एक साथ : जी गुरू जी!

रामू : पर गुरुजी! इससे मेरे प्रश्न से क्या संबंध है?
गुरुजी : बताता हूँ बेटा! आप की माँ बहुत पहले से दाल बनाती आ रहीं हैं| वह इतने साल से दाल बना रहीं हैं , इसका मतलब उन्हें अच्छे से दाल बनानी आती होगी| किसी कारण बस यदि किसी दिन दाल अच्छी न भी बने तो भी उनकी प्रशंसा करनी चाहिए| यदि कोई किसी की प्रशंसा करता है तो वह व्यक्ति खुश होकर अपने काम को और मेहनत से और बड़ियाँ तरीके से करने की कोशिस करता है| ठीक है न?
एक साथ : जी गुरुजी! हमने तो यह कभी सोचा ही नहीं था।

गुरुजी : अगर आप अपना गृहकार्य करते हो, और तब भी मैं आपकी प्रशंसा नहीं करता हूँ, तो आप क्या सोचेंगे?

रामू : आप हमारी प्रशंसा नहीं करेंगे तो हम उस काम को मन लगाकर बड़ियाँ से नहीं कर पाएंगे।
गुरुजी : बहुत अच्छा! ठीक उसी तरह ही अच्छे कामों की प्रशंसा करना, उस काम करने वाले व्यक्ति को और अच्छे से काम करने के लिए प्रोत्साहित करता है या अच्छे से काम करने की शक्ति देता है| समझे बच्चों।

सभी बच्चे एक साथ : जी गुरुजी! (और घण्टी बजती है टन, टन,टन ..... और दूसरा क्लास शुरू होता है)...


## 5. ಭಾರತಾಂಬೆಯ ಮಗಳು

***– ಹನುಮಂತ ರಾಜು***

ಬೋರ್ಗರೆಯುವ ಕತ್ತಲಲ್ಲಿ ಚಂದಮಾಮ ನೆತ್ತಿಯಲ್ಲಿ,
ನಕ್ಷತ್ರದ ಮಿಣುಕು ಹುಳ ಇಣುಕಿ ಮಿನುಗಿ ನೋಡುತ್ತಿವೆ.
ಮಿಗ ಖಗಗಳ ಸಂತತಿಯು ಗರಿ ಮುದುರಿ ಮಲಗಿವೆ
ಭಾರತಾಂಬೆ ನಿನ್ನ ಮಡಿಲು ಸಕಲ ಜೀವಿಗಳಿಗೆ ಕಡಲು.

ನೆತ್ತಿಯಲ್ಲಿ ಕಾರ್ಮೋಡ ಸುತ್ತಿ ಮುಳುಗಿ ಏಳುತಿವೆ
ಬೆತ್ತಲಾದ ಬಯಲಲ್ಲಿ ಹೆಗ್ಗಿಲ್ಲದ ಹೆಗ್ಗಣಗಳು ಮುಗಿಬಿದ್ದಿವೆ,
ಎದೆ ಸೀಳಿವೆ, ಬಿಸಿರಕ್ತದ ಹಸಿ ವಾಸನೆ ಮಸುಕಿನಲ್ಲಿ ಚೆಲ್ಲಿದೆ.
ಭಾರತಾಂಬೆ ನಿನ್ನ ಮಡಿಲು ಸಕಲ ಜೀವಿಗಳಿಗೆ ಕಡಲು.

ಕಣ್ಣಿನಲ್ಲಿ ಕಟ್ಟಿದೆ ದೆಹಲಿಯ ಆ ಚಿತ್ರಣ, ಗೋಳಿನ ಆಕ್ರಂದನ,
ಹೃದಯವೇ ಜಲ್ಲೆಂದಿದೆ ನರ ನಾಡಿ, ಮೈ ರೋಮ,
ಸೆಟೆದಿವೆ, ಕಟ ಕಟನೆ ಮುರಿದಿವೆ, ಮನುಕುಲವೆ ತಲೆ ತಗ್ಗಿಸಿದೆ.
ಭಾರತಾಂಬೆ ನಿನ್ನ ಮಡಿಲು ಸಕಲ ಜೀವಿಗಳಿಗೆ ಕಡಲು.



ಬಿದ್ದಿಹಳು ಧರೆಗುರುಳಿ ಮಾಂಸದ ಮುದ್ದೆಯಂತೆ, ಹೂಳಿಡುವ
ಶ್ವಾನಗಳು ಆಲಿಸುತಿವೆ ಇವಳ ಗೋಳು, ತಿರುಗುವ ಮಂದಿಗಿಲ್ಲ ತಿರುಗಿ
ನೋಡುವ ತವಕ, ನಮ್ಮೆಲ್ಲರ ಹೆಣ್ಣು ಮಗಳು ಮನುಕುಲದ ಪ್ರತಿ ಇವಳು
ಭಾರತಾಂಬೆ ನಿನ್ನ ಮಡಿಲು ಸಕಲ ಜೀವಿಗಳಿಗೆ ಕಡಲು.

ರೊಚ್ಚಿಗೆದ್ದಿತೋ ಮಂದಿ ಕಚ್ಚೆ ಹರುಕರ ಹೊಸಕಿ ಹಾಕಲು,
ಗರ್ಭವ ಸೀಳ ಹೊರಟ ಗರ್ಭದಿಂದ ಬಂದವರ.
ನಿರ್ಭಯಳಿಗೆ ಅಭಯ ಹೇಳಿ ಮುಂದೆ ಮುಂದೆ ಸಾಗಿವೆ.
ಭಾರತಾಂಬೆ ನಿನ್ನ ಮಡಿಲು ಸಕಲ ಜೀವಿಗಳಿಗೆ ಕಡಲು.

ಸಾಕು ಮಾಡಿ ಇನ್ನೂ ಮೌನ ಏಳಿರಿ ಎಚ್ಚರಿಸಿ
ಕಚ್ಚೆ ಕಟ್ಟಿ ಟೊಂಕ ಕಟ್ಟಿ ರಣಚಂಡಿ ಅವತಾರವ ಆಹ್ವಾನಿಸಿ ನಿಲ್ಲಿರಿ.
ಮನುಕುಲ ಉದ್ಧಾರದ ನವ ಇತಿಹಾಸ ಬರೆಯಿರಿ.
ಭಾರತಾಂಬೆ ನಿನ್ನ ಮಡಿಲು ಸಕಲ ಜೀವಿಗಳಿಗೆ ಕಡಲು.

## 6. Women in ancient and modern India

***- Rajesh S Mahantmath***

Ours is a country where women for centuries have been equated with goddesses and at the same time exploited by people in the society. It is said that in ancient India women enjoyed freedom to learn and educate themselves, participate in rituals, express their views freely not only in their family but also at scholarly assemblies, choose their husbands and even participate in administrative matters of the state. There are various examples of women like Gargi, Maitreyi and others who are said to have composed Vedic hymns which suggests that women had the right to education. Ancient epics mention that women had the right to choose their husbands in '*swayamvara*'. Ancient texts like the *'Manu Smriti'* mention certain very progressive precepts about treatment of women in society. Girl children were to be treated impartially and they were given equal rights and responsibilities as boys. Dowry system was non-existent but the concept of *'streedhana'* seems to have been widely prevalent. Widows and women separated from their husbands could remarry. Women from a lower Varna could also marry men from a higher Varna as the caste system

was not rigid. In case the male teacher in a Gurukul died, his wife was authorized to carry out the responsibility of instructing the students. A family was considered complete only if it consisted of women and girls. Girls also had the right to inherit their parents' or husbands property.



Due to the impact of various socio-economic, political and cultural influences society became more and more conservative and orthodox leading to women enjoying lesser and lesser freedom in India throughout the medieval period. Though there have been many instances where women overcame social barriers and left their mark in history. Razia Sultana, the first and only women to ascend the throne of Delhi, Nur Jahan, Durgavati, Chand Bibi, Jijabai and others are examples of women with courage, foresight and administrative talent. Many women have authored notable philosophical works and enriched the vernacular literature. Works of saint poets like Meerabai, Akkamahadevi, Muktabai, Janabai and others are studied with reverence even today. The medieval period also saw certain evil practices such *Sati, Johar, Purdah* and *Devadasi* system becoming strongly rooted in the Indian society. On the pretext of providing protection women were confined to the four walls of the house and prevented from seeking education or interacting with people outside the family. This curbed the social and emotional progress of women. Women started to be increasingly regarded as incapable and dependent and their main job was to beget children, take care of the family, cook food and have no say in important family decisions.

In the 19$^{th}$ century we see many women at the forefront of freedom movement. Brave women like Kittur Chennamma, Rani Laxmibai, Begum Hazrat Mahal and others fought valiantly against the British while defending their motherland. Savitribai Phule (who was the first woman school teacher in India) started the first school for girls in 1848 in Pune. Chandramukhi Basu became the first woman in British Empire to become a graduate. Kadambini Ganguly and Anandibai Joshi became the first women doctors in South Asia. The nation will forever remain indebted to Bhikaji Cama, Vijayalakshmi Pandit, Aruna Asaf Ali, Captain Lakshmi Sehgal, Sarojini Naidu, Kasturba Gandhi and many others who played a very important role in the freedom struggle.

A nation's progress is judged by how its women and children are treated. After independence with the increase in women friendly schemes and initiatives for ensuring good education, health, social welfare and development of women there has been a slow change in their socio-economic conditions. Women constitute more than 48% of our population and there has been a rise in women literacy levels from less than 10% after independence to more than 65% at present. Women have gained entry and made a mark in almost all fields on par with men. They have brought laurels to the country in sports, academics, arts and literature, music, politics, science and technology and various other fields. Bachendri Pal, P T Usha, Mary Kom, Arundhati Roy, Lata Mangeshkar, Asha Bhosale, Indira Gandhi, Kalpana Chawla, Sunita Williams, Sania Mirza, Tessy Thomas, Indra Nooyi, Chanda Kochchar, Saina Nehwal, Naina Lal Kidwai and many others are outstanding inspirations and role models to other women in the society.

But there is still a long way to go. The Constitution of India has granted equal rights to women and many laws and regulations are in place to ensure the safety and well-being of women. But even after so many years of independence; dowry, rape, sexual harassment, molestation, eve-teasing, female foeticide, denying equal wages and many other forms of women exploitation are still prevalent in the society. Women are discriminated and underestimated. Many places are still considered unsafe for women travelling alone or

late at night. Women as still looked upon as objects and badly portrayed in print and electronic media which needs to be dealt with strict enforcement of laws and regulations and the offenders punished severely. All said and done each and every citizen should inculcate respect for women and girls and try to ensure their well-being and development in every possible way. We should remember that today's strong and enlightened women alone are the real harbingers of a strong and powerful India tomorrow.

## 7. ಸ್ಫೂರ್ತಿ ತುಂಬಿದ ಭೇಟಿ

*– ಗೋಪಾಲಕೃಷ್ಣ ಐ,*

ಸುಮಾರು ಐದಾರು ವರ್ಷದ ಹಿಂದಿನ ಮಾತು. ಅಂದು ವಾರದ ಮೊದಲ ದಿನ. ಬೆಂಗಳೂರು ಕಚೇರಿಯಿಂದ ಇನ್ನೂ ಮುಂದೆ ಮಂಡ್ಯವೇ ನಿಮ್ಮ ಕರ್ಮಭೂಮಿ ಎಂದು ಹೇಳಿ ಕಳುಹಿಸಿದ್ದರು. ಹೀಗಿರುವಾಗ ನಮ್ಮೂರಿನವರೇ ಸುಮಾರು ನಾಲ್ಕು ದಶಕಗಳ ಹಿಂದೆ ಮಂಡ್ಯದ ಕಲ್ಲಹಳ್ಳಿಯಲ್ಲಿ ಬಂದು ನೆಲೆಸಿದ್ದ ಶಂಕರನಾರಾಯಣರಾಯರನ್ನು ಭೇಟಿಮಾಡಿದೆ. ಅಂದು ಅವರ ವಯಸ್ಸು ೭೬.



ಶಂಕರನಾರಾಯಣರವರು ಹುಟ್ಟಿದ್ದು ಕಾಸರಗೋಡು ಜಿಲ್ಲೆಯ ಪೆರಡಾಲ ಗ್ರಾಮದ ಪಾಂಡೇಲುವಿನಲಿ. ಇವರದು ಕೃಷಿಕ ಹಿನ್ನೆಲೆಯ ಕುಟುಂಬ. ಹುಟ್ಟು ಬಡತನ. ಹಾಗೆ ಮನೆಯ ಹತ್ತಿರ ಶಾಲೆಗೆ ಸೇರಿ ಐದನೇ ಕ್ಲಾಸ್ ಮುಗಿಸಿದರು. ಆದರೆ ತೀರ್ಥರೂಪರಿಗೆ ಇವರು ಸಂಸ್ಕೃತ ಕಲಿಯಲಿ ಎಂಬ ಆಶಯ. ಇದನ್ನು ಈಡೇರಿಸಲೆಂದು ಅವರು ಮಹಾಜನ ಸಂಸ್ಕೃತ ಕಾಲೇಜಿಗೆ ಹೋಗಿ ಮೂರನೇ ತರಗತಿಗೆ ಸೇರಿದರು. ಶಾಲೆಗೆ ಹೋಗಲು ಇದ್ದದ್ದು ಒಂದು ಜೊತೆ ಚಡ್ಡಿ, ಅಂಗಿ. ಕಾಲ್ನಡಿಗೆಯಲ್ಲಿ ಶಾಲೆಗೆ ಹೋದರು. ಇತರ ಅನಾನೂಕೂಲತೆಗಳ ನಡುವೆಯೂ ನೀರ್ಚಾಲಿನಲ್ಲಿರುವ ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಓದು ಮುಂದುವರಿಸಿದರು. ೧೯೫೬ರಲ್ಲಿ ಕೇರಳದ ಮೊದಲನೇ ಬ್ಯಾಚ್‌ನಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆ ಬರೆದು ತೇರ್ಗಡೆ ಹೊಂದಿದರು. ಅಂದು ನಡೆದ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂಬ ಹೋರಾಟದಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡರು.

ಮನೆ ಯಜಮಾನನಾದ ಅಣ್ಣನಿಗೆ ತನ್ನ ತಮ್ಮ ಕೃಷಿಗೆ ಸಹಾಯ ಮಾಡಲೆಂದು ಆಶಯ. ಆದರೆ ಇವರಿಗೆ ವಿದ್ಯಾಭ್ಯಾಸ ಮುಂದುವರಿಸಿ, ಶಿಕ್ಷಕನಾಗಿ ದುಡಿಯುವ ತುಡಿತ. ಮನಸ್ಸಿನ ತೊಳಲಾಟಕ್ಕೆ ವೇದಿಕೆಯಾದುದು ಮನೆಯ ಪಕ್ಕದಲ್ಲಿರುವ ಗುಡ್ಡದ ತುದಿಯಲ್ಲಿದ್ದ ಬಂಡೆಕಲ್ಲು. ಏಕಾಂತದಲ್ಲಿ ತನ್ನೆಲ್ಲಾ ತುಮುಲಗಳನ್ನು ಬಂಡೆಕಲ್ಲಿನೊಂದಿಗೆ ಹಂಚಿಕೊಂಡರು. ಅಲ್ಲೊಂದು ಕಲ್ಲಿನಲ್ಲಿಯೇ ಅರಳಿದ ಸುಂದರವಾದ ನೀರಿನ ತೊಟ್ಟಿಯನ್ನು ನಿರ್ಮಿಸಿದರು. ಈ ಬಂಡೆಕಲ್ಲಿಗೆ ಮಾತು ಬರುತ್ತಿದ್ದರೆ, ದಾಖಲಿಸಲು ಬರುತ್ತಿದ್ದರೆ ಇವರ ಸಂಭಾಷಣೆಗಳನ್ನು, ಮಾನಸಿಕ ಹೊಯ್ದಾಟಗಳನ್ನು ಕೇಳಬಹುದಿತ್ತೇನೋ?

ಅಣ್ಣನಿಗೆ ತಮ್ಮ ಓದುವುದು ಇಷ್ಟವಿರಲಿಲ್ಲ. ತಮ್ಮನಿಗೆ ಕೃಷಿ ತೊಡಗಿಸಿಕೊಳ್ಳುವುದು ಸುತರಾಂ ಒಪ್ಪಿಗೆಯಿರಲಿಲ್ಲ. ಇವರ ನಡುವಿನ ತಾಕಲಾಟ ಅಂತ್ಯ ಕಂಡದ್ದು ಇವರು ಕೆಲಸಕ್ಕೆ ಸೇರಿದಾಗ. ಕೊನೆಗೂ ತನ್ನ ಅಣ್ಣನನ್ನು ಮನವೊಲಿಸಿ ಉದ್ಯೋಗ ನಿಮಿತ್ತ ಬಂದು ನೆಲೆಸಿದ್ದು ಮಂಗಳೂರಿನಲ್ಲಿ. ಅವರು ಅಂದು ಕಡೆಂಗೋಡ್ಲು ಶಂಕರ ಭಟ್ಟರ ಸಂಪಾದಕ'ತ್ವದ "ರಾಷ್ಟ್ರಮತ" ಪತ್ರಿಕೆಯಲ್ಲಿ ವರದಿಗಾರರಾಗಿ ಸೇರಿದರು. ಆಗ ಅವರ ವೇತನ ರೂ. ೬೦. ಪ್ರಾಯಶ: ೧೯೫೭ ಇಸವಿ ಇರಬೇಕು. ಹಾಗೆಯೇ ತಮ್ಮ ಶಿಕ್ಷಣವನ್ನು ಸಂಜೆ ಕಾಲೇಜಿನಲ್ಲಿ ಮುಂದುವರಿಸಿದರು. ಸಂಪಾದಕರ ಅನುಪಸ್ಥಿತಿಯಲ್ಲಿ ಇವರೇ ಸಂಪಾದಕರಾಗಿ ಕಾರ್ಯ ನಿರ್ವಹಿಸಿ, ಅವರಿಂದಲೇ ಬೇಷ್ ಅನಿಸಿಕೊಂಡರು. ಈ ಪತ್ರಿಕೆಯನ್ನು ಅವರ ಮಕ್ಕಳು ವಹಿಸಿಕೊಳ್ಳಲು ನಿರಾಸಕ್ತಿ ವಹಿಸಿದರು. ಆದ್ದರಿಂದ ಅನಿವಾರ್ಯವಾಗಿ ಇದನ್ನು ನಿಲ್ಲಿಸಲೇಬೇಕಾದ ಪರಿಸ್ಥಿತಿ ಒದಗಿ ಬಂತು. ಈ ಸಂದರ್ಭದಲ್ಲಿ ಇವರನ್ನು ಕರೆದು, ಪತ್ರ ನೀಡಿ ಮಂಡ್ಯದ ಕಾನ್ವೆಂಟ್ ಸಿಸ್ಟರ್ ಅವರನ್ನು ಭೇಟಿ ಮಾಡಲು ತಿಳಿಸಿದರು. ಹಾಗೆಯೇ ಕೇವಲ ರೂ. ೧೫ ಜೇಬಲ್ಲಿಟ್ಟುಕೊಂಡು ರಾತ್ರೋರಾತ್ರಿ ಹೊರಟರು. ಬೆಳಗ್ಗೆ ಬಂದು ಮಧ್ವಾಚಾರ್ಯರ ಹೋಟೆಲ್‌ನಲ್ಲಿ ಉಪಾಹಾರ ಸೇವಿಸಿ, ಕಾನ್ವೆಂಟ್‌ನ ಸಿಸ್ಟರ್ ಭೇಟಿ ಮಾಡಿ ನಿಮ್ಮಲ್ಲಿ ಕೆಲಸ ಖಾಲಿ ಇದೆಯೇ? ಎಂದು ಕೇಳಿದರು. ತಕ್ಷಣ ಅವರು "ಇಲ್ಲಿ ಯಾವುದೇ ಕೆಲಸ ಖಾಲಿ ಇಲ್ಲ" ಎಂದು ಉತ್ತರ ನೀಡಿದರು. ತಕ್ಷಣವೇ ತಮ್ಮಲ್ಲಿದ್ದ ಕಡೆಂಗೋಡ್ಲು ಶಂಕರ ಭಟ್ಟರು ಕೊಟ್ಟ ಪತ್ರವನ್ನು ನೀಡಿದರು. ಪತ್ರವನ್ನು ನೋಡಿದ ತಕ್ಷಣ ಸಿಸ್ಟರ್ ಕಣ್ಣುಗಳಲ್ಲಿ ಗಳಗಳನೇ ಕಣ್ಣೀರ ಧಾರೆ ಇಳಿಯಿತು. ಇವರು ಸಹಾ ಕಡೆಂಗೋಡ್ಲು ಶಂಕರ ಭಟ್ಟರ ಶಿಷ್ಯರೇ. ತಕ್ಷಣವೇ "ನೀವು ಕ್ಲಾಸ್ ತೆಗೆದುಕೊಳ್ಳಿ" ಎಂದರು. ನಿರರ್ಗಳವಾದ ಇವರ ಪಾಠ ಪ್ರವಚನ ಕೇಳಿದ ಸಿಸ್ಟರ್ "ನೀವು ಗುರುಗಳನ್ನು ಮೀರಿದ ಶಿಷ್ಯ" ಎಂದು ಪ್ರಶಂಶಿಸಿದರು.

೧೯೬೯ರಲ್ಲಿ ಮಂಡ್ಯದಲ್ಲಿ ಬಂದು ನೆಲೆಸಿದ ಇವರು ಸೈಂಟ್ ಜೋಸೆಫ್ ಕಾನ್ವೆಂಟ್ ಶಾಲೆಯಲ್ಲಿ ಸಂಸ್ಕ್ರತ ಶಿಕ್ಷಕರಾಗಿ ಸೇವೆ ಪ್ರಾರಂಭಿಸಿದರು. ಇವರ ನೇತೃತ್ವದಲ್ಲಿ ಶಾಲೆಯ ಮಕ್ಕಳನ್ನೇ ಪ್ರೇರೇಪಿಸಿ ಅವರಿಂದಲೇ ಕಥೆ, ಕವನ, ಲೇಖನ ಬರೆಯಿಸಿ ಶಾಲಾ ಮ್ಯಾಗಜಿನ್' ಪ್ರಾರಂಭಿಸಿದ'ರು.

ತಮ್ಮೂರಿನ ಹಲವು ಮಕ್ಕಳಿಗೆ ತಮ್ಮ ಮನೆಯಲ್ಲಿ ಆಶ್ರಯ ನೀಡಿದರು. ಇವರಿಗೆ ಶಿಕ್ಷಣ ಮುಂದುವರಿಸಲು ಸರ್ವ ರೀತಿಯಲ್ಲೂ ಸಹಕಾರ ನೀಡಿದರು. ಅಣ್ಣನ ಮಗನನ್ನೇ ಕರೆದುಕೊಂಡು ಬಂದು ಸ್ನಾತಕೋತ್ತರ ಪದವಿ ಪಡೆಯುವವರೆಗೆ ಕಲಿಯುವಂತೆ ಪ್ರೋತ್ಸಾಹಿಸಿದರು. ಆ ಮೂಲಕ ಶಿಕ್ಷಣದ ಆಶಯವನ್ನು ತಮ್ಮ ಕುಟುಂಬಕ್ಕೆ ಸಾರಿದರು.

ಜನ ನಿವೃತ್ತಿಯಾದ ನಂತರ ಆಕಾಶ ತಲೆಗೆ ಬಿದ್ದವರಂತೆ ಇರುತ್ತಾರೆ. ತಮ್ಮ ಕೆಲಸ ಮುಗಿಯಿತು ಎಂದೇ ಭಾವಿಸುತ್ತಾರೆ. ಆದರೆ ಶಂಕರನಾರಾಯಣರಾಯರು ತಮ್ಮ ಸಂಸ್ಕೃತ, ಕನ್ನಡ, ಹಿಂದಿ ಭಾಷೆ ಸಾಹಿತ್ಯವನ್ನು ಸಾಮಾನ್ಯ ಜನರಿಗೆ ತಲುಪಿಸುವ ತಪಸ್ಸನ್ನು ಆರಂಭಿಸಿದ್ದೇ ಆಗ. ಸಾಹಿತ್ಯ ಸೇವೆಗಾಗಿ ಮನೆಯ ಮಹಡಿಯ ಕೊಠಡಿಯನ್ನೇ ಮೀಸಲಾಗಿಟ್ಟರು. ಸಾಹಿತ್ಯ, ಸಂಗೀತ, ನೃತ್ಯ, ಯೋಗ ಕಾರ್ಯಕ್ರಮಗಳಿಗಾಗಿ ಉಚಿತವಾಗಿಯೇ ನೀಡುತ್ತಾ ಬಂದರು. ಷಟ್ಪದಿಯಲ್ಲಿ ಹಲವು ಕವನ ಸಂಕಲನಗಳು ಪ್ರಕಟಗೊಂಡವು. ಬಹುಭಾಷೆಯಲ್ಲಿನ ಸಾಹಿತ್ಯ ಸೇವೆ ನಿರಂತರವಾಗಿ ನಡೆಸುತ್ತಲೇ ಇದ್ದಾರೆ. ಇಂದಿಗೂ ಮುಂದುವರಿಯುತ್ತಿದೆ. ಮಂಡ್ಯ ಸುತ್ತಮುತ್ತಲಿನ ಶಾಲೆಗಳಲ್ಲಿ ಸಂಸ್ಕೃತ ಬೋಧನೆಯನ್ನು ಪ್ರಾರಂಭಿಸಲು ಪ್ರೇರಣೆ ನೀಡಿದರು. ಇದು ನಿರಂತರವಾಗಿ ನಡೆಯುವಂತೆ ಪ್ರೋತ್ಸಾಹಿಸಿದರು. ನಿವೃತ್ತಿಯ ನಂತರ ಇಲ್ಲಿನ ಹಲವು ಸಂಸ್ಥೆಗಳಲ್ಲಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಶಿಕ್ಷಕರಾಗಿ ನಿರಂತರವಾಗಿ ತೊಡಗಿಸಿಕೊಂಡರು.

ಅವರಿಗೆ ನಿವೃತ್ತಿ ಹೊಸ ಹುರುಪನ್ನು, ಯೌವನವನ್ನೂ ಕೊಟ್ಟಿದೆ. ೭೬ರ ಹರೆಯದಲ್ಲಿರುವ ರಾಯರ ಲವಲವಿಕೆ ಖುಷಿ ಸಂತೋಷ ಕೊಡುತ್ತದೆ. ಕೆಲಸದಲ್ಲಿ ನಿಷ್ಠೆ, ಮುಖದಲ್ಲಿ ರಾಚುವಂತೆ ಕಾಣುವ ಸಜ್ಜನಿಕೆ, ಮಂದಹಾಸ, ಹುಮ್ಮಸ್ಸು ನೋಡಿದಾಗ ಅವರಿಗೆ ನಿವೃತ್ತಿಯಾಗಲಿಲ್ಲವೋ ಎಂದೆನಿಸುತ್ತದೆ. ಇನ್ನೂ ಸಾಧಿಸುವುದು ಸಾಕಷ್ಟಿದೆ ಎಂಬ ಹುಮ್ಮಸ್ಸು ನನಗೆ ಬರುತ್ತದೆ. ಮಂಡ್ಯಕ್ಕೆ ಕಾಲಿಟ್ಟ ಮೊದಲ ಘಳಿಗೆಯಲ್ಲಿ ರಾಯರನ್ನು ಭೇಟಿ ಮಾಡಿದ್ದು ಸದಾ ಲವಲವಿಕೆಯಿಂದಿರಲು ಸ್ಫೂರ್ತಿಯಾಯಿತು. ಈ ಸ್ಫೂರ್ತಿ ನಿಮಗೂ ಸಿಕ್ಕರೆ............

## 8. ಅಮ್ಮ

- ***ಗುಂಡಪ್ಪ ಕಾಟೀಕರ***



ಜೀವದೊಳಗೊಂದು ಜೀವ ಕರುಣಿಸಿ
ಅದರೊಳಾತ್ಮವ ತುಂಬಿಸೆನ್ನ ಮನುಜನನ್ನಾಗಿಸಿ
ಉಷೆಯ ಕಿರಣ ನೋಡಲೆಂದು ಕಣ್ಣು ಕೊಟ್ಟ
ತಾಯಿಗೆನ್ನ ನಮನ ಜನ್ಮದಾತೆಗೆನ್ನ ನಮನ

ಜಗದಗಲ ಮುಗಿಲಗಲ ಅಮ್ಮ ನಿನ್ನ ತ್ಯಾಗದೊಲವು
ಮುಕ್ಕೋಟಿ ದೇವತೆಗಳಿಗಧಿಕ ನಿನ್ನ ಪಾದ ಸ್ಪರ್ಶವು
ಬದುಕು ತುಂಬ ನಿನ್ನ ನಾಮಸ್ಮರಣೆ ಮಾಡಿದೊಡೇನು
ತುಂಬಲಾರದ ಋಣವು ನನ್ನ ಹೆಗಲಿಗುಳಿವುದಿನ್ನು

ನವಮಾಸ ನನ್ನ ಹೊತ್ತು ಕಷ್ಟಗಳೆಲ್ಲ ಸಹಿಸಿಕೊಂಡು
ನೋವನೆಲ್ಲ ನೀನೇ ನುಂಗಿ ನಗುವು ಮಾತ್ರ ನನಗೆ ನೀಡಿ
ಪರಶಿವನಿಗಿಂತಲೂ ದಿವ್ಯ ಕಲಾಧರೆಯಾಗಿ
ಬದುಕಿಗೊಂದು ಭಾಷೆ ಬರೆದೆಯಮ್ಮ ನೀ ನನಗಾಗಿ

ಅಳುವ ಧನಿಯ ಕೇಳಿ ಓಡಿಬಂದು ಮುದ್ದಿಸಿ
ಲಾಲಿಹಾಡಿ ರಮಿಸಿ ರಮಿಸಿ ತೊಟ್ಟಿಲೊಳು ಮಲಗಿಸಿ
ಎದೆಯ ಅಮೃತ ತೇದು ತೇದು ನನ್ನ ದೇಹವ ತುಂಬಿದೆ
ಆ ನಿನ್ನ ಎದೆ ಹಾಲಿಗಿಂತಲಧಿಕ ಧರೆಯೊಳಗಿನ್ನೇನಿದೆ?

ಶೂಲದೊಳಗೂ ಸವಿಯ ನೆನೆದು ಜಗದ ಬೆಳಕಿಗೆನ್ನ ತಂದು
ಮೂಕವಾದ ಬಾಯಿಯಿಂದ ಕರುಳು ಕೂಗಿ ಕರೆಯಲೆಂದು
ಅಮ್ಮ ಎಂಬೆರಡಕ್ಷರದ ಬ್ರಹ್ಮ ಪದವ ಕಲಿಸಿ
ಜ್ಞಾನ ಮೂರ್ತಿಯಾಗಿಸಿದಿಯೆಮ್ಮ ಮನವ ತುಂಬಿ ಹರಸಿ

ನನ್ನ ಹಸಿವ ನೀಗಲೆಂದು ಬಿಸಿಲ ಬೆವರ ಸುರಿಸಿದೆ
ಹಗಲು ರಾತ್ರಿಗಳೆರಡು ಒಂದು ಮಾಡಿ ನನ್ನ ಬೆಳೆಸಿದೆ
ಹಳೆಯ ಹರಕು ಸೀರೆಯಲ್ಲೇ ಬದುಕನೆಲ್ಲ ಸವೆಸಿ ಸವೆಸಿ
ನಗೆಯನೊಂದು ನಕ್ಕು ಬಿಟ್ಟೆ ನನ್ನ ಬಾಳ ತುಂಬಿಸಿ

ಜಗವ ಬೆಳಗುವ ಚಂದಿರನಂತೆ ನನ್ನ ಬದುಕು ಬೆಳಗಿದೆ
ಏನೊಂದು ಕಪ್ಪು ಕಲೆಯಿಲ್ಲದ ನೀನೇ ಅವನಿಗಿಂತ ಸಿಂಧು
ಶಾಂತವಾಗಿ ಹರಿವ ಸಾಗರದಂತೆ ನಿನ್ನ ಜೀವ ಭಾವವು
ಅಮ್ಮಳಾಗಿ ನೀಗಿಸಿದೆ ನನ್ನೆಲ್ಲ ದಣಿವು

ಮತ್ತೆ ಮತ್ತೆ ಜನ್ಮಗಳೇನಾದರಿದ್ದಲ್ಲಿ
ಸಾಗರಾಳದ ನಿನ್ನ ರತ್ನ ಗರ್ಭದಲ್ಲಾಗಲಿ
ಬ್ರಹ್ಮ, ವಿಷ್ಣು, ಮಹೇಶ್ವರಗಳಿಗಿಂತ ಮೊದಲು
ನಿನ್ನ ಚರಣ ತೊಳೆಯುವೆ ನಿನ್ನ ಪೂಜೆ ಗೈಯ್ಯುವೆ

## 9. ಅಪ್ಪ ಕೊಡಿಸಿದ ಅಂಗಿ ಮತ್ತು ನಾಟಕ ಶಾಲೆ.

- ***ಸತ್ಯ ಸಾಕ್ಷಿ ತುಮರಿ***



ಅವಳಿಗೆ ನಾಟಕ ಎಂದರೆ ಅದೇನೋ ಒಂದು ತರಹದ ಖುಷಿ, ಸಂತೋಷ. ಅವಳ ಆ ಸಂಭ್ರಮವನ್ನು ನೋಡಿಯೇ ಅವಳ ತಂದೆ ಮನಸ್ಸಿಲ್ಲದಿದ್ದರೂ ಅವಳನ್ನು ನಾಟಕ ಶಾಲೆಗೆ ಸೇರಿಸಿದ. ನಾಟಕ ಶಾಲೆ ಸೇರಿದ ದಿನ ಅವಳನ್ನು ನೋಡಬೇಕು....... ಅದೆಂತ ನಲಿದಾಟ? ಅದೆಂತ ಕುಣಿದಾಟ? ಅಂದು ಅವಳು ಅವಳಾಗಿರಲಿಲ್ಲ. ಬದಲಿಗೆ ಎತ್ತರದ ಪರ್ವತವನ್ನು ಹತ್ತಿ ಸಾಧನೆ ತೋರಿದ ಪರ್ವತಾರೋಹಿಯಂತೆ ನೋಡುಗರಿಗೆ ಕಾಣುತ್ತಿದ್ದಳು. ನಾಟಕ ಶಾಲೆಯವರೆಲ್ಲರಿಗೂ ಒಂದೇ ದಿನದಲ್ಲಿ ಆತ್ಮೀಯಳೂ ಆಗಿಬಿಟ್ಟಳು. ಎಷ್ಟರ ಮಟ್ಟಿಗೆ ಆಕೆ ಆತ್ಮೀಯಳಾದಳೆಂದರೆ ಕೆಲವು ಮಂದಿ ಆಕೆ ನಾಟಕ ಶಾಲೆ ಸೇರಿದ ಕೆಲವು ಗಳಿಗೆ ಗಳಲ್ಲಿಯೇ ತಮ್ಮ ಕಷ್ಟಗಳನ್ನು ಹೇಳಿಕೊಂಡರು. ಅದೇ ದಿನ ಒಬ್ಬಳಂತೂ ಆಕೆಯ ಕಾಲಿನ ಮೇಲೆ ಮಲಗಿ ತನ್ನ ದುಃಖ ತೋಡಿಕೊಂಡು ಜೋರಾಗಿ ಬಿಕ್ಕಿ ಬಿಕ್ಕಿ ಅತ್ತೇ ಬಿಟ್ಟಳು. ಅಷ್ಟೊಂದು ಆತ್ಮೀಯತೆ ಆಕೆಯಲ್ಲಿ ಇತ್ತು. ಆದರೆ ಆಕೆ ತನ್ನ ಅಮ್ಮ ಹೆಣೆದ ಜಾಲದೊಳಗೆ ಸಿಲುಕಿ ನಲುಗುತ್ತಿದ್ದಳು ಯಾರೊಡನೆಯೂ ಹೇಳಿಕೊಳ್ಳಲಾಗದೆ ಒದ್ದಾಡುತ್ತಿದ್ದಳು.

ಆಕೆಯನ್ನು ಅಪ್ಪ ನಾಟಕ ಶಾಲೆಗೆ ಸೇರಿಸಿದ್ದು ನಿಜ, ಆದರೆ ಆಕೆ ಅದರಲ್ಲಿಯೇ ಮುಂದುವರೆಯಬೇಕೆಂಬ ಆಸೆಯಾಗಲೀ, ಅದರಲ್ಲಿಯೇ ಆಕೆ ಯಶಸ್ಸು ಸಾಧಿಸಲಿ ಎಂಬ ಮನ ತುಂಬಿದ ಹಾರೈಕೆಯ ಮಾತುಗಳಾವುವೂ ಆಕೆಯ ಅಪ್ಪನಿಂದಾಗಲೀ ಅಥವಾ ಅಮ್ಮನಿಂದಲೇ ಆಗಲಿ ಬಂದಿರಲೇ ಇಲ್ಲ, ಏಕೆಂದರೆ ನಾಟಕದ ಬಗ್ಗೆಯಾಗಲೀ. ನಟರ ಜೀವನ ಕ್ರಮದ ಕುರಿತು ಆಕೆಯ ಮನೆಯಲ್ಲಿ ಯಾವುದೇ ರೀತಿಯ ಧನಾತ್ಮಕ ಭಾವನೆ ಇರಲಿಲ್ಲ. ಆದರೆ ಅದೇಕೋ ಇವಳಿಗೆ ಮಾತ್ರ ನಾಟಕದ ಹುಚ್ಚು ಸ್ವಲ್ಪ ಹೆಚ್ಚಾಗಿಯೇ ಹಿಡಿದಿತ್ತು. ಸಂಪ್ರದಾಯ, ಆಚಾರ–ವಿಚಾರ, ಮಡಿವಂತಿಕೆ, ಮೈಲಿಗೆಗಳ ನಡುವೆ ಈಕೆ ಬೆಳದರು ಕೂಡ ಅದೆಲ್ಲವನ್ನೂ ವಿರೋಧಿಸಿ ತಾನು ನಾಟಕ ಶಾಲೆ ಸೇರಲೇ ಬೇಕೆಂದು ಪಟ್ಟು ಹಿಡಿದಿ ಕುಳಿತಳು. ಅಂತೂ ಹಟ ಮಾಡಿ ಅತ್ತು ಕರೆದು ನಾಟಕ ಶಾಲೆ ಸೇರಿಯೇ ಬಿಟ್ಟಳು.

ನಾಟಕ ಶಾಲೆಗೆ ಸೇರುವ ಸಂಭ್ರಮದಲ್ಲಿ ಆಕೆ ಮನೆಯವರು ತಾನು ನಾಟಕ ಶಾಲೆಯಲ್ಲಿ ಅವಮಾನಿತಳಾಗಿ ಅಲ್ಲಿಂದ ಬಿಟ್ಟು ಬಂದು ಮನೆಯ ಸಂಪ್ರದಾಯದ ಕಟ್ಟಳೆಯೊಳಗೆ ಬಂದಿಯಾಗುವಂತೆ ಮಾಡುತ್ತಾರೆಂಬ ಯಾವ ಕುರುಹುಗಳೂ ಆಕೆಯ ಮನೋಭೂಮಿಕೆಗೆ ಸುಳಿಯಲೇ ಇಲ್ಲ. ಆದರೆ ನಾಟಕ ಶಾಲೆ ಸೇರಿದ ದಿನ ರಾತ್ರಿ ಯಾಕೋ ಅಪ್ಪ ಕೊಡಿಸಿದ ತನ್ನ ಬಟ್ಟೆಗಳನ್ನು ನೋಡಿ ಆಕೆ ಕುಸಿದು ಹೋದಳು.

ಇತ್ತ ಕಡೆ ಆಕೆಯ ಮನೆಯಲ್ಲಿ ದೊಡ್ಡದೊಂದು ಹೋರಾಟವೇ ನಡೆದಿತ್ತು. ಅಮ್ಮ ಅಪ್ಪ ಇಬ್ಬರೂ ಮಾತನಾಡಿಕೊಳ್ಳುತ್ತದ್ದರು, 'ಅವಳು ತುಂಬಾ ಬುದ್ಧಿವಂತೆ. ಏನಾದರೂ ಉಪಾಯ ಮಾಡಿ ನಾಟಕ ಶಾಲೆಯಲ್ಲಿಯೇ ಮುಂದುವರೆಯುತ್ತಾಳೆ. ಬಹುಷಃ ನಾವು ಅವಳು ಅಲ್ಲಿಂದ ಬಿಟ್ಟು ಬರಲು ಮಾಡಿದ ಉಪಾಯ ಫಲಿಸಲಿಕ್ಕಿಲ್ಲ.' ಎಂದು ಅಮ್ಮ ಹೇಳಿದರೆ, ಅಪ್ಪ, 'ಏನಾದರೂ ಮಾಡಿಕೊಳ್ಳಲಿ, ಅವಳು ನಾಟಕ ಶಾಲೆ ಸೇರಿದ ದಿನವೇ ನನ್ನ ಪಾಲಿಗೆ ಅವಳು ಅರ್ಧ ಸತ್ತು ಹೋದಳು.' (ಸಧ್ಯ ಪೂರ್ತಿ ಸತ್ತಳೆಂದು ಆತನ ಬಾಯಿಯಿಂದ ಬರಲಿಲ್ಲವಲ್ಲ, ಅಂದರೆ ಮಗಳ ಮೇಲೆ ಆತನಿಗೆ ಇನ್ನೂ ಪ್ರೀತಿ ಇದೆ ಎಂದಾಯಿತು.) ಎಂದು ಗಟ್ಟಿಯಾಗಿ ಬೈಯುತ್ತಾ ಕೋಪ ಮಾಡಿಕೊಂಡು ರೂಮು ಸೇರಿಬಿಟ್ಟ. ಆದರೆ ಆತನಿಗೂ ತಿಳಿದಿರಲಿಲ್ಲ ನಾಟಕದ ಬಗ್ಗೆ ತನ್ನಲ್ಲಿ ಇಷ್ಟೊಂದು ತಾತ್ಸಾರ ಮೂಡಲು ಕಾರಣಳಾದವಳು ತನ್ನ ಹೆಂಡತಿಯೇ ಎಂದು.

ಅದೇನೇ ಇರಲಿ ಆದರೆ ನಾಟಕ ಶಾಲೆ ಸೇರಿದ ಆಕೆಗೆ ತನ್ನವರೆಂದು ನಂಬಿಕೊಂಡಿದ್ದ ತನ್ನವರ ಮೋಸದ ಜಾಲ ನಿಧಾನವಾಗಿ ಅರಿವಾಗುತ್ತಾ ಹೋಯಿತು. ಎಲ್ಲಿಯೋ ಒಂದು ಕಡೆ ಮಾನಸಿಕವಾಗಿ ಕುಗ್ಗತೊಡಗಿದಳು.

ಆಕೆಗೆ ತಾನೂ ಗಂಡುಮಕ್ಕಳಂತೆ ನಾಟಕ ಶಾಲೆಯಲ್ಲಿ ಬೆಳೆಯಬೇಕೆಂಬ, ಬೆರೆಯಬೇಕೆಂಬ ಉತ್ಕಟ ಬಯಕೆ. ಅದರಲ್ಲೂ ಅದೇಕೋ ಗಂಡುಮಕ್ಕಳಂತೆ ತಾನೂ ಲಾಗ ಹಾಕಬೇಕೆಂಬ ಅತಿಯಾದ ಮಿತಿ ಇಲ್ಲದ ಆಸೆ. ಆಸೆ ತಪ್ಪಲ್ಲ ಆದರೆ, ಸಾಮಾನ್ಯದವರ ಪಾಲಿಗೆ ಅದು ಇನ್ನೆಂದೂ ಈಡೇರದ ಬಯಕೆ. ಆದರೆ ಆಕೆ ಗಟ್ಟಿಗಿತ್ತಿ. ಹಾ! ಲಾಗ ಹಾಕುವ ಆಕೆಯ ಆಸೆಗೆ ಅಡ್ಡಿ ಬಂದದ್ದು ಅಮ್ಮನ ಮಾತಿನಿಂದ ಪ್ರೀತಿಯ ಅಪ್ಪ ಕೊಡಿಸಿದ ಬಟ್ಟೆಗಳು. ಆಕೆಗೆ ಅಪ್ಪ ಕೊಡಿಸಿದ ಎಲ್ಲಾ ಬಟ್ಟೆಗಳು ಲಂಗ ಮತ್ತು ರವಿಕೆ ಯಾಗಿತ್ತು. ಆ ಬಟ್ಟೆ ತೊಟ್ಟು ಆಕೆ ಲಾಗ ಹಾಕಲು ಸಾಧ್ಯವಿರಲಿಲ್ಲ. ಅದು ಅಲ್ಲದೆ ಋತುಮತಿಯಾದಾಗ ಆ ಬಟ್ಟೆಗಳು ಆಕೆಗೆ ತುಂಬಾ ಹಿಂಸೆ ಕೊಡುತ್ತಿದ್ದವು, ಯಾರೊಡನೆಯೂ ಹೇಳಿಕೊಳ್ಳಲಾಗದ ವೇಧನೆ ಆಕೆಯಲ್ಲಿ, ಅದೇನೇ ನೋವಿದ್ದರೂ ಆಕೆಯ ನಗು ಕಿಂಚಿತ್ತೂ ಮಾಸಿರಲಿಲ್ಲ. ಆದರೆ ಆಕೆಯ ಪಾಲಿಗೆ ಅಪ್ಪನೆಂಬುವ ಅಪ್ಪ ಶತೃವಿನಂತೆ ಕಂಡ. ಅಮ್ಮ ಆಕೆಯ ಪಾಲಿಗೆ ಆಜನ್ಮ ವೈರಿಯಾದಳು. ಎಲ್ಲಿಯಾದರೂ ಬೇರೆ ಬಟ್ಟೆ ಸಿಗಬಹುದೇನೋ ಎಂಬ ಆಸೆಯಿಂದ ಚೀಲದೊಳಗೆ ಕೈಯಾಡಿಸಿದಳು, ಊಹುಂ ಲಂಗ ರವಿಕೆಗಳು ಆಕೆಯ ಸುತ್ತಲೂ ನಿರ್ಜೀವವಾಗಿ ಬಿದ್ದುಕೊಂಡವು. ಸ್ವಲ್ಪ

ಸಮಯದ ನಂತರ ಅದೇ ಬಟ್ಟೆ ತೊಟ್ಟು ಮೊದಲಿನದೇ ನಗು ಮುಖದಿಂದ ನಾಟಕದ ಅಂಕಣಕ್ಕೆ ಬಂದಳು, ಎಲ್ಲರೂ ತಮ್ಮ ತಮ್ಮ ತಯಾರಿಯಲ್ಲಿ ಮುಳುಗಿ ಹೋಗಿದ್ದರು. ಈಕೆ ಏನು ಮಾಡಬೇಕೆಂದು ತೋಚದೆ ಹಾಗೆಯೇ ಗರ ಬಡಿದಂತೆ ನಿಂತು ಬಿಟ್ಟಳು.

ಹೀಗೆಯೇ ಒಂದು ವಾರ ಕಳೆಯಿತು. ಒಂದು ದಿನ ಮುಂಜಾನೆ ಆಕೆಗೆ ಅದೇನೆನಿಸಿತೋ ನಾಟಕದ ಅಂಕಣಕ್ಕೆ ಬಂದವಳೇ ಕಾಲಿಗೆ ಗೆಜ್ಜೆ ಕಟ್ಟಿ, ತನ್ನ ಲಂಗವನ್ನು ಕಚ್ಚೆಯಂತೆ ಕಟ್ಟಿ, ಲಾಗ ಹಾಕಿದಳು, ಮನಸ್ಸು ತುಂಬುವಷ್ಟು ಲಾಗ ಹಾಕಿದಳು. ಕೊನೆಗೆ ದಿಗಂತದೆಡೆ ನೋಡಿ ಥ್ಯಾಂಕ್ಯು ಅಪ್ಪಾ... ನಾನು ಈ ರೀತಿ ಯೋಚಿಸಿ ಬೆಳೆಯಲು ಸಹಾಯ ಮಾಡಿರುವುದಕ್ಕೆ ತುಂಬಾ ಥ್ಯಾಂಕ್ಸ ಅಪ್ಪಾ ಎಂದು ಖುಷಿಯಿಂದ ಹೇಳಿ ಮತ್ತೆ ಲಾಗ ಹಾಕಿದಳು, ಹಾಕಿಯೇ ಹಾಕಿದಳು ಲಾಗ.

## 10. तेरे बंधन, मेरी पहचान??

**-रचना पटवर्धन**


**मुझपे बंधन, मुझपे** रोड़े,
होंट सीकर, तू मेरी हिम्मत को तोडे,
छेड़े तू , पड़े मुझ पे लांछन,
खुद अपनी वासना पर शराफत को ओढ़े।

देवी के नाम पे मंदिर में झोका,
दासी मानकर कोठे पे फूंका,
गंगा को पवित्रता की बेड़ी,
पर उसी शील से खुद को न रोका।

हर मोड पे, हर चौक पे,
झुकती रही, बिकती रही,
हर दर पे, हर मज़ार पे,
जलती रही, बिछती रही,

मैं शक्ति हूँ? मैं भक्ति हूँ?
मैं काली हूँ? मैं हूँ सती?
मैं जननी हूँ? मैं भगिनी हूँ?
मैं पुत्री हूँ? मैं हूँ रति?
मैं देवी हूँ? मैं दासी हूँ?
मैं गंगा हूँ? मैं हूँ मति?

मर्द तू, आदमी हे तू,
आज़ाद तू, नादानी हे तू?
तुझपे कोई रोक नहीं?
तुझपे महानता का बोझ नहीं?



पर अब नहीं मुझको ज़रूरत,
इन नामों की, इन रिश्तों की,
अब मुझे न चाह न आस हे,
तेरे दिये इन खोखले पहचान की।

अबला समझकर हाथ न बढ़ाना,
रूप के तू गुणगान न गाना,
बुद्धि, बल, तीक्ष्णता मे,
तुझसे दो कदम आगे ही पाना

## 11. Women or Human Being

- ***Randeep Kaur***



"To be yourself in a world that is constantly trying to make you something else is the greatest accomplishment."

Every day one can see the media showcasing the atrocities happening on women and portraying them as a weakling. Simply, wondering why does the society encourage a divide between living like a Women or a Human Being? And if only society were responsible, then, there wouldn't have been souls like Mother Teresa, Florence Nightingale, who paved their own path, who moved in the direction of being Human beings and not Women.

Let's choose a path which will lead us in the direction of being a Human Being.

## 12. ಯಾರು ನಾನು?

***– ಹರೀಶ ಶೆಟ್ಟಿ ಬಂಡ್ಸಾಲೆ***



ಯಾರು ನಾನು? ನಾನ್ಯಾರು ಎಂದು ಇದುವರೆಗು ಹೇಳಿಕೊಳ್ಳಲಾಗಲಿಲ್ಲಾ. ನನ್ನ ಅಸ್ತಿತ್ವ, ನನ್ನ ತನ ಯಾವುದನ್ನು ವ್ಯಕ್ತಪಡಿಸಲಾಗಲಿಲ್ಲ. ನಟ್ಟ ನಡುವಿನ ಬಯಲಿನಲ್ಲಿ ಸುತ್ತುವರಿದು "ಯಾರು ನೀನು?" ಎಂದು ಕೇಳಿದರು. ನಾನು ಗಾಬರಿಯಾದೆ, ಗಲಿಬಿಲಿಗೊಂಡೆ, ಹೇಳಿಕೊಳ್ಳಲು ಹಂಬಲಿಸಿದೆ. ಏನು ತೋಚದೆ ತಡವರಿಸಿದೆ. ತೋಚಿದನ್ನು ಹೇಳಲು ಅಶಕ್ತನಾದೆ. ಕೊನೆಗೂ ಹೇಳಲಾಗಲಿಲ್ಲ. ಅದೇ ಕೊನೆ, ಮತ್ಯಾವತ್ತು ಯಾರು ನನ್ನನ್ನು ಕೇಳಲಿಲ್ಲ. ಅವರವರಿಗೆ ತೋಚಿದಂತೆ ಹೇಳತೊಡಗಿದರು. ಅವರ ಮಗಳೆಂದರು, ಇವರ ತಂಗಿ ಎಂದರು, ಅವನ ಮಡದಿ ಎಂದರು, ಇನ್ಯಾವನದ್ದೊ ಇಟ್ಟುಕೊಂಡವಳೆಂದರು, ಸುಮ್ಮನಿದ್ದೆ. ಸುಮ್ಮನಿದ್ದದ್ದೆ ತಪ್ಪಾಯಿತಲ್ಲ, ಅದನ್ನೆ ಸರಿ ಎಂದರು, ಸದಾ ಸುಮ್ಮನಿರಬೇಕು ಎಂದರು. ಸಹನಾಮೂರ್ತಿ ಎಂದು ಬಿರುದು ಕೊಟ್ಟು ಮಾಡಿದ ವ್ಯಭಿಚಾರವನೆಲ್ಲಾ ಸಹಿಸಿಕೊಳ್ಳುವಂತೆ ಮಾಡಿದರು.

ಆಟ ಆಡಲು ಹೊರಟೆ, ಓದ ಬೇಕೆಂದು ಆಶಿಸಿದೆ, ನನಗಿಷ್ಟವಾದ ಉಡುಗೆ ತೊಡಲು ಬಯಸಿದೆ. ಕಣ್ಣು ಕೆಂಪಗೆ ಮಾಡಿ ತೀಕ್ಷ್ಣ ನೋಟ ಬೀರಿದರು, ಸುಮ್ಮನಾದೆ. ಎದೆ ಸೆಟೆದು ನಿಂತರು, ಹಿಂದೆ ಸರಿದೆ. ಹಿಂದಟ್ಟಿ ಬಂದರು, ಹಿಂದೋಡ ತೊಡಗಿದೆ. ಯಾರೋಬ್ಬರು ನಿಲ್ಲು ಅನ್ನಲಿಲ್ಲ. ನಿಲ್ಲು ಅನ್ನುವವರಿಗಾಗಿ ಶತಶತಮಾನಗಳಿಂದ ಕಾಯುತಲಿದ್ದೇನೆ. ಈಗ ಅರಿವಾಯ್ತು, ನಿಲ್ಲು ಎನ್ನಲು ಯಾರು ಬರಲಾರಲೆಂದು ತಡವಾಗಿ ಅರಿವಾಯ್ತು. ಕಣ್ಣು ಕೆಂಪಗೆ ಮಾಡಿ ಗದರಿಸಿದವರಿಗೆ ನೆಸೆ ಕೊಟ್ಟಿದ್ದು ನನ್ನ ಮೌನವಲ್ಲವೆ? ಹೌದು ನನ್ನ ಮೌನ, ನಾನೆ ಸೃಷ್ಟಿಸಿಕೊಂಡ ಮೌನ. ತರತರಹದ ಚುಚ್ಚು ಮಾತುಗಳನ್ನ ಜೀರ್ಣಿಸಿಕೊಂಡ ಮೌನ, ಬಿದ್ದ ಬಾಸುಂಡೆಗಳನ್ನ ಸಹಿಸಕೊಂಡ ಮೌನ, ಮದ್ಯದ ನಶೆಯ ಉಸಿರಿನ ಮುತ್ತುಗಳನ್ನ ವಿರೋಧಿಸದ ಮೌನ.

ಈ ನಿರರ್ಥಕ ಮೌನ ಸಂಕೋಲೆಯನ್ನು ಒಡೆದು ಹೊರಬರಲೆಬೇಕು. ನಾನು ಸ್ವತಂತ್ರ, ಸ್ವತಂತ್ರ, ಸ್ವತಂತ್ರ, ಎಂದು ಅಷ್ಟ ದಿಕ್ಕುಗಳಿಗೂ ಅನುರಣಿಸುವಂತೆ ಚೀರಬೇಕು. ನನಗೆ ನಿಮ್ಮ ರಕ್ಷಣೆ ಬೇಡ, ಕರುಣೆ ಬೇಡ, ಕಾಳಜಿ ಬೇಡ, ವಿಶೇಷ ಗೌವರವವು ಬೇಡ. ನಾನು ನಿಮ್ಮಂತೆ ಎನ್ನುವ ಸತ್ಯ ನಿಮಗರಿವಾದರೆ ಸಾಕು. ನಾನು ನೀಡಿರುವ ಪ್ರೀತಿ ನನಗು ನೀಡಿ. ನನಗೂ ನಿಮ್ಮಂತೆ ಬದುಕಲು ಬಿಡಿ.........

## 13. Bus 101

***- Priyanka***

She chooses the trousers
To the salwar today
Crisp white
The handkerchief
She tucks on to the collar
Her sweat to save from
Through the day
A bead at a time

She weaves -
A long plait of her hair
Letting an inch free
She pins free jasmine
Which match with tiny flowers
On her blue underwear
Showing through her
Trousers when the sun shines
Hard
She pulls her socks
From under the silver anklets
Parts her hair to settle vermillion
On duty she boards Bus 101
Crisscrossing through the corridors
Screaming names of places
With a sheaf of tickets
And a bang hung
Unabated
Unabashed
Unwrapped
Unbowed



## 14. ಮನೆಗೆ ಬಂದಿಳಿದ ಮನದಾಳದ "ಗೌರಿ"

***– ಷಡಕ್ಷರಿ***

ಮಡದಿ ದಿನದ ವಾರ್ತೆ ಒಪ್ಪಿಸುತ್ತಿದ್ದಳು. ಮಕ್ಕಳದ್ದು ಮುಗಿದಿತ್ತು. ತೋಟದ್ದೂ ಮುಗಿದಿತ್ತು. ಅಮ್ಮನ ಆರೋಗ್ಯ, ಅವರು ಮೊನ್ನೆ ಹಿರಿಯ ನಾಗರೀಕರ ಆಟೋಟಗಳಲ್ಲಿ, ಮೂರ್ನಾಲ್ಕು ಪ್ರಶಸ್ತಿ ಪಡೆದಿದ್ದು, ಅವರ ಸಂದರ್ಶನ ಪ್ರಜಾವಾಣಿಯಲ್ಲಿ ಬಂದಿದ್ದು, ಎಲ್ಲಾ ಕೇಳಿಯಾಗಿತ್ತು. ನಮ್ಮ ಮೇಕೆ ಮರಿ ಸಿರಿ ಬೆಳೆದು ನಿಂತು ಅವಳಿಗೊಬ್ಬ ,ಜೊತೆಗಾರನ ಹುಡುಕಾಟ ಮುಂದುವರಿದದ್ದು ಎಲ್ಲ ವರದಿಯಾಗಿತ್ತು. ಕೊನೆಯಲ್ಲಿ ಅವಳು ಹೇಳಲು ಬಾಕಿಯಿದ್ದಿದ್ದು ಒಂದು ಮಾತ್ರ ಬಾಕಿಯಿತ್ತು. ನಾನೇ ತಡೆಯಲಾರದೆ ಕೇಳಿದೆ. “ಚಿನ್ನು ಹೇಗಿದ್ದಾಳೆ? ಮತ್ತೆ ಡಾಕ್ಟರ್ ಯಾವ ದಿನ ಹೇಳಿದ್ದಾರೆ” ಅಂದೆ.

ಒಂದು ಗಳಿಗೆ ಮೌನ. “ಬಾಬು ನಿನಗೆ ಹೇಗೆ ಹೇಳೋದು ಅಂತಾನೇ ಗೊತ್ತಾಗ್ತಾ ಇಲ್ಲಾ” ಅಂದ ಅವಳ ಮಾತು ಕೇಳಿ ನನ್ನ ಕಾಲು ಕುಸಿಯಲಾರಂಭಿಸಿತು. ನನಗೂ ಅವಳು ಏನು ಹೇಳಲಿರುವಳೋ ಅದನ್ನು ಕೇಳಲು ಇಷ್ಟವಿಲ್ಲದವನಂತೆ ಮೌನಿಯಾದೆ. ಇದನ್ನೂ ಊಹಿಸಿದ್ದ ಅವಳು “ಹಾಗೇನಿಲ್ಲಾ, ಖಜಙ ಚಿಟಡಿಙಣ ಟಿಠಿ” ಅಂದದ್ದು ಕೇಳಿದ ಮೆಲೆ ನನಗೆ ನಿಂತಿದ್ದ ಉಸಿರಾಟ ಸರಾಗವಾಗಿತು. ನನ್ನ ಧಾವಂತ ತಡೆಯಲಾರದೇ ಒಮ್ಮೆಗೇ ಹೇಳಿದೆ. ಅದೇನಾಯಿತು ನೇರವಾಗಿ ಹೇಳೆಂದೆ. ಸುಧಾರಿಸಿಕೊಂಡ ಅವಳು “ಚಿನ್ನು ಬದುಕಿದ್ದೇ ಹೆಚ್ಚು” ಅಂದದ್ದು ಕೇಳಿ ಮತ್ತೆ ತಲೆ ಸುತ್ತಲಾರಂಭಿಸಿತು.

* * *

ಈಗ ಚಿನ್ನು ತುಂಬು ಗರ್ಭಿಣಿ ಮತ್ತು ದ್ಯೈತ್ಯೆ. ಅವಳು ಈ ದಿನಗಳಲ್ಲಿ ನಮ್ಮ ತೋಟದಲ್ಲಿ ತುಂಬ ದೂರ ನಡೆಯೋದು ಕಷ್ಟವಾಗುತ್ತೆ ಅಂತ ಅವಳನ್ನು ಮನೆಯ ಹಿಂದಿನ ತೋಟದಲ್ಲೇ ಮೇಯಲು ಬಿಡುತ್ತಿದ್ದಳು ಮಡದಿ. ಅಂದು ತಿಪಟೂರಿನಲ್ಲಿ ನಮ್ಮ ಮನೆಯ ಎಲ್ಲ ಸದಸ್ಯರ

ಎಲ್.ಐ.ಸಿ ಪಾಲಿಸಿ ತುಂಬಿಸಿ ಬರಲು ಮಧ್ಯಾಹ್ನ ಚಿನ್ನುಳನ್ನು ಮೇಯಲು ನೆರಳಲ್ಲಿ ಮರಕ್ಕೆ ಹಗ್ಗದಿಂದ ಕಟ್ಟಿ ಹೊರಟು ಹೋಗಿದ್ದಾಳೆ. ಅಲ್ಲಿಯ
ಎಲ್ಲಾಕೆಲಸಗಳನ್ನು ಆದಷ್ಟೂ ಬೇಗ ಮುಗಿಸಿ ಬಂದ ಅವಳು ತಕ್ಷಣ ಮನೆಯ ಹಿಂದಿನ ತೋಟಕ್ಕೆ ಓಡಿದ್ದಾಳೆ. ಅಷ್ಟರಲ್ಲಾಗಲೇ ನಮ್ಮ ಪಕ್ಕದ ತೋಟದ ಹುಡುಗರು, ಸುತ್ತಮುತ್ತಲಿನ ಮನೆಯ ಹೆಂಗಸರೆಲ್ಲಾ ನಮ್ಮ ತೋಟದೊಳಗೆ ಗುಂಪು ಸೇರಿದ್ದನ್ನು ನೋಡಿ ಬೆಚ್ಚಿದ್ದಾಳೆ.

ಚಿನ್ನುಗಾಗಿ ಅವಳ ಕಣ್ಣುಗಳು ಹುಡುಕಿವೆ. ದೂರದಲ್ಲಿ ನೆರಳಲ್ಲಿ ನಿಂತು ಸುಧಾರಿಸಿಕೊಳ್ಳುತ್ತಿದ್ದ ಅವಳನ್ನು ನೋಡಿ ಸಮಾಧಾನಗೊಂಡ ಅವಳು ಜನರ ಬಳಿಸಾರಿದಾಗ ಅವರು ಹೇಳಿದ ಮಾತು ಕೇಳಿ ನೆಲಕ್ಕೆ ಕುಸಿದಿದ್ದಾಳೆ. ಅವರು ಅವಳನ್ನು ಸಮಾಧಾನ ಮಾಡಿ ಏನೂ ಆಗುವುದಿಲ್ಲ ಸುಮ್ಮನಿರು ದೇವರಿದ್ದಾನೆ ಅಂಥ ಹೇಳಿ ಸಂತೈಸಿದ್ದಾರೆ.

* * *



ಈ ಚಿನ್ನು ಸಣ್ಣ ಹುಡುಗಿಯಿಂದಲೂ ತುಂಬು ಪ್ರಿತಿಯಿಂದ ಬೆಳೆದವಳು. ಅವಳಿಗೆ ಹಗ್ಗ ಕಟ್ಟಿ ಮೇಯಿಸಿದ್ದೇ ಇಲ್ಲ ಅವಳ ತವರು ಮನೆಯಲ್ಲಿ. ಅವರ ಮನೆಯಿಂದ ಬಂದ ಮೇಲೆ ನಮ್ಮ ಮನೆಯಲ್ಲೂ ಅವಳನ್ನು ಕಟ್ಟಿ ಮೇಯಿಸಿದ್ದೇ ಇಲ್ಲಾ. ವಿಶಾಲ ತೋಟದಲ್ಲಿ ಸುತ್ತಾಡುತ್ತಾ ಅವಳಿಗೆ ಇಷ್ಟ ಬಂದ ಮೇವು ಮೇಯಲು ಬಿಟ್ಟಿದ್ದೆವು. ಈಗಿನ ಪರಿಸ್ಥಿತಿಯಲ್ಲಿ ಅವಳು ಅಷ್ಟು ಸುತ್ತಾಡಿ ಸುಸ್ತು ಮಾಡಿಕೊಳ್ಳದಿರಲೀ ಎಂಬ ಒಂದೇ ಉದ್ದೇಷಕ್ಕೆ ಮಡದಿ ಅವಳನ್ನು ಉದ್ದದ ಹಗ್ಗಕ್ಕೆ ಕಟ್ಟಿ ಹೋಗಿದ್ದಾಳೆ. ಹಗ್ಗದೊಂದಿಗೆ ಮೇಯ್ದು ಅಭ್ಯಾಸವಿಲ್ಲದ ಚಿನ್ನು ಮೇಯುತ್ತಾ ಮೇಯುತ್ತಾ ಅದೇ ಹಗ್ಗವನ್ನು ಕೊಂಬು ಮತ್ತು ಕಾಲುಗಳ ನಡುವೆ ಸಿಗಿಸಿಕೊಂಡು ಬಿಟ್ಟಿದ್ದಾಳೆ.

ಬಿಡಿಸಿಕೊಳ್ಳೋ ಆತುರದಲ್ಲಿ ಹಗ್ಗ ಮತ್ತಷ್ಟೂ ಅವಳ ಕಾಲುಗಳಿಗೆ ಸುತ್ತಿಕೊಂಡು ಬಿಟ್ಟಿದೆ. ಅವಳ ಮೈ ಬಾರ ತಡೆಯಲಾರದೇ ಅವಳು ನೆಲಕ್ಕೆ ಬಿದ್ದು ಕಾಲು ಜಾಡಿಸುತ್ತಾ ಜೋರು ಶಬ್ಧ ಮಾಡಲತ್ತಿದ್ದಾಳೆ. ಅವಳ ಹೊರಳಾಟ ಹೂಂಕಾರ ಕೇಳಿದ ಪಕ್ಕದ ತೋಟದ ಹುಡುಗರು ನಮ್ಮ ಮುಳ್ಳು ಬೇಲಿ ಹಾರಿ ಒಳಬಂದು ನೋಡುವುದರೊಳಗೆ ಅವಳ ಕುತ್ತಿಗೆಗೂ ಹಗ್ಗ ಸುತ್ತಿ ಚಿನ್ನು ಕೊನೆಯ ಉಸಿರಿನ ಹಂತಕ್ಕೆ ಬಂದಿದ್ದಾಳೆ. ಚಿನ್ನುವಿನ ಅದೃಷ್ಟಕ್ಕೆ ತಕ್ಷಣ ಆ ಹುಡುಗರು ಕೈಲಿದ್ದ ಕುಡುಗೋಲಿಂದ ಅವಳ ಸಾವಾಗಿ ಬಂದಿದ್ದ ಹಗ್ಗಗಳನ್ನು ಕತ್ತರಿಸಿ ಬಿಸಾಡಿದ್ದಾರೆ. ಅಷ್ಟರಲ್ಲಾಗಲೇ ಅವಳ ಹೊಟ್ಟೆ ನೆಲದಲ್ಲಿದ್ದ ದಪ್ಪ ಕಲ್ಲುಗಳಿಗೆ ತಗಲಿ ತೂತೂ ಬಿದ್ದಿದೆ, ತೊಡೆ ಹರಿದಿದೆ. ಹುಡುಗರು ಪಕ್ಕದ ಮನೆಗಳ ಹೆಂಗಸರನ್ನ ಸೇರಿಸಿ ಚಿನ್ನುಳಿಗೆ ನೀರು ಕುಡಿಸಿ, ಅವಳ ಗಾಯಕ್ಕೆ ಹರಿಶಿನದ ಪುಡಿ ಕಟ್ಟಿ, ಸುದಾರಿಸಿದ್ದಾರೆ. ಅಷ್ಟರಲ್ಲಿ ಉಸಿರುಗಟ್ಟಿ ಇವಳೂ ಹೋಗಿದ್ದಾಳೆ.

* * *

ಅಂದಿನಿಂದ ಮಡದಿ ಬೆಳಗ್ಗೆ ಎದ್ದರೆ ಸಾಯಂಕಾಲವಾದರೆ ತಪ್ಪದೇ ಮಾಡುವ ಫೋನ್ ಕರೆಗಳಲ್ಲಿ ಚಿನ್ನುವಿನ ಗಾಯದ ಬಗ್ಗೆ, ಅದು ವಾಸಿಯಾಗುತ್ತಿರೋ ಸೂಚನೆಗಳ ಬಗ್ಗೆ ನನಗೆ ಸವಿವರ ವರದಿ ನೀಡತೊಡಗಿದ್ದಳು. ಮದ್ಯೆ ಮದ್ಯೆ ನನ್ನ ಗೆಳೆಯರಾದ ಇಬ್ಬರು ಪಶು ವೈದ್ಯರುಗಳ ಭೆಟಿಯನ್ನೂ ಫೋನಾಯಿಸಿ ಏರ್ಪಡಿಸಿದ್ದೆ. ಊರಲ್ಲಿ ಕೆಲವೇ ಕ್ಷಣಗಳಿಗೆ ಹಬ್ಬಿಬಿಡುವ ಈ ರೀತಿಯ ಸುದ್ದಿಗಳ ಸುಳಿವಿನಿಂದ ನಮ್ಮ ಮನೆಗೆ ಹುಡುಕಿಬಂದ ನಮ್ಮೂರ ಜನರು ನನ್ನ ಮಡದಿಗೆ ತಿಳಿಸಿ ಹೋದ ನಾಟೀ ವೈದ್ಯಗಳನ್ನೂ ಅವಳು ಮಾಡುವುದು ಬಿಟ್ಟಿರಲಿಲ್ಲ. ಅಂತೂ ಇಂತೂ ಎರಡು ವಾರಗಳಲ್ಲಿ ಚಿನ್ನು ಹೊಟ್ಟೆ ಮೇಲೆ ರಕ್ತ ಬರುವಂತ ಗಾಯವಾಗಿದ್ದು, ತೊಡೆಮೇಲೆ ಮಾಂಸ ಕಾಣುವಂತೆ ಕಿತ್ತುಕೊಂಡಿದ್ದ ಗಾಯಗಳೆಲ್ಲಾ ಮಾಯುತ್ತಿರುವ ಸಮಾಧಾನದ ಸುದ್ದಿ ಕೊಟ್ಟಿದ್ದಳು.

ಮಲೆನಾಡಿನಲ್ಲಿ ಬಿಡದೆ ಸುರಿಯುವ ಮಳೆಯಂತೆ ಬರುತ್ತಿದ್ದ ಈ ವರ್ಷದ ಮಳೆಗೆ ಹೆದರಿ ಚಿನ್ನುಳನ್ನು ಅವಳ ಗಾಯ ಮಾಯುವ ಸಲುವಾಗಿ ಕೊಟ್ಟಿಗೆಯಲ್ಲೇ ಕಟ್ಟಿ ನನ್ನ ಮಡದಿ ಆರೈಕೆ ಮಾಡಿ ಅಂತೂ ಕೊನೆಗೆ ಅವಳ ಗುರಿ ಸಾಧಿಸಿದ್ದಳು.ಚಿನ್ನುಳ ಗಾಯ ಮಾದಿದ್ದಕ್ಕೇನೋ ಎಲ್ಲರೂ ತುಂಬಾ ಖುಷಿಗೊಂಡಿದ್ದೆವು. ಆದರೆ ನನ್ನ ಮತ್ತು ಅವಳ ಮನದ ಮೂಲೆಯಲ್ಲೆಲ್ಲೋ ಯಾರಿಗೂ ಹೇಳಿಕೊಂಡಿರದ ಒಂದು ಸಂಕಟ ಗುಂಗೆ ಹುಳುವಿನಂತೆ ಕೊರೆಯುತಲಿತ್ತು.

ಅಂದು ಚಿನ್ನು ಬಿದ್ದು ಹೊರಳಾಡಿದಾಗ ಎಲ್ಲಾದರೂ ಅವಳ ಹೊಟ್ಟೆಯಲ್ಲಿ ಕಣ್ಮುಚ್ಚಿ ಕುಳಿತಿದ್ದ ಅವಳ ಕರುವಿನ ಜೀವವೇನಾದರೂ ಈ ಅಘಾತಕ್ಕೆ ಶಾಶ್ವತವಾಗಿ ಕಣ್ಣು ಮುಚ್ಚಿ ಬಿಟ್ಟಿದ್ದಿದ್ದರೆ? ಎಂಬ ನಮ್ಮಿಬ್ಬರೊಳಗಿನ ಸಂಕಟ ನಮಗೆ ಮಾತ್ರಾ ಗೊತ್ತಿತ್ತು. ಮನೆಯವರಿಗೆ ಹೆಚ್ಚು ತಿಳಿಸದೇ ನನ್ನ ಇಬ್ಬರೂ ಪಶುವೈದ್ಯ ಗೆಳೆಯರಲ್ಲಿ ವಿನಂತಿಸಿಕೊಂಡಿದ್ದೇನೆಂದರೆ ನನಗೆ ಇಬ್ಬರ ಜೀವವೂ ಮುಖ್ಯ. ಇಬ್ಬರನ್ನೂ ಉಳಿಸಿಕೊಡಿ ಅಂತಾ ಬೇಡಿಕೊಂಡಿದ್ದೆ. ಇಬ್ಬರೂ "ಪರವಾಗಿಲ್ಲ, ಆ ರೀತಿಯ ಸೂಚನೆ ಗಳೇನೂ ಕಾಣೂತ್ತಿಲ್ಲಾ, ಇಂಟರ್ನಲ್ ಬ್ಲೀಡಿಂಗ್ ಕೂಡಾ ಇಲ್ಲಾ ನಥಿಂಗ್ ಟು ವರೀ" ಎಂದಿದ್ದರು.

* * *

ಮಡದಿ ಅವಳ ಆರೈಕೆಯನ್ನು ಚಾಚೂ ತಪ್ಪದೇ ಪಾಲಿಸುತ್ತಾ, ಚಿನ್ನುವಿಗೆ ಯಾವ ಆಹಾರ ಎಷ್ಟು ಕೊಡಬೇಕು, ಯಾವರೀತಿಯ ಹುಲ್ಲು ಕೊಡಬೇಕು ಎಂಬೆಲ್ಲಾ ಕಾಳಜಿ, ಜಾಗರೂಕತೆಗಳೊಂದಿಗೆ ಸಾಕುತ್ತಿರಲು. ಚಿನ್ನುವಿನ ದಿನ ತುಂಬಿ ಬಂದಿತ್ತು. ಅವಳ ನಡೆಯಲ್ಲಿ, ಊಟ ನೀರಡಿಕೆಗಳ ಬಯಕೆಯಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರಹತ್ತಿತ್ತು. ನನಗೆ ಮಡದಿ ಇವತ್ತು ಇಲ್ಲಾ ತಪ್ಪಿದರೆ ನಾಳೆ ಚಿನ್ನು ಈಯ್ದುಕೊಳ್ಳಬಹುದು ಎಂದಿದ್ದಳು.

ಅದೇ ಸಮಯಕ್ಕೆ ನಮ್ಮ ಮಕ್ಕಳಿಗೆ ದಸರಾ ರಜ ಘೋಷಣೆಯಾಗಿತ್ತು. ಅವರ ಬಹು ದಿನದ ಕನಸಾದ ಉತ್ತರ ಕರ್ನಾಟಕದ / ಕನ್ನಡದ ಕೆಲವು ದರ್ಶನೀಯ ಸ್ಥಳಗಳನ್ನು ಕುಟುಂಬ ಮತ್ತು ದೂರದ ದುಬೈನ ಗೆಳೆಯನ ಕುಟುಂಬದ ಸಮೇತರಾಗಿ ನೋಡುವ ಕನಸಿನ ಗಾಡಿಯೇರಿ ಕುಳಿತಿದ್ದರು. ದಿನ ಬೆಳಗಾದರೆ ಮಕ್ಕಳು ಅವರ ಪಯಣದ ವಿವರ ಯಾವ ಯಾವ ಊರಿಗೆ ಯಾವಯಾವತ್ತು ಹೋಗುವುದೆಂಬ ವಿವರ ನನ್ನೊಡನೆ ಚರ್ಚಿಸಿ ಅವರ ಆಸೆ ಪೂರೈಸಿಕೊಳ್ಳುತ್ತಿದ್ದರು. ನನಗೂ ಮತ್ತು ನನ್ನ ಮಡದಿಗೂ ಚಿನ್ನು ಯಾವಾಗ ಕರು ಹಾಕುವಳೋ ಎಂಬ ಧ್ಯಾನ. ಇವರ ಟೂರಿನ ಖುಷಿಯ ಮದ್ಯೆ ನಮಗೆ ಕುತೂಹಲವಿದ್ದಿದ್ದು ಚಿನ್ನು ಈಯುವ ಕರು ಗಂಡೋ ಅಥವಾ ಹೆಣ್ಣೋ ಎಂಬುದಲ್ಲಾ! ಅದು ಈ ಜನ್ಮಕ್ಕೆ ಬದುಕಿ ಬರುತ್ತಾ ಎಂಬುದಷ್ಟೇ ಆಗಿತ್ತು!

* * *

ಆ ದಿನವೂ ಬಂತು. ಬೆಳ್ಳಂಬೆಳಗ್ಗೆ ನಾನಿನ್ನೂ ಮಲಗಿದ್ದೆ. ಪಕ್ಕದಲ್ಲೇ ಇದ್ದ ಆ ಫೋನ್ ರಿಂಗಣಿಸಿತು. ಕಣ್ಣು ಬಿಡದೇ ಹಾಗೇ ಕಿವಿಗೆ ಹಿಡಿದರೆ ಕಿರಿಯ ಮಗನ "ಅಪ್ಪಾ ಅಪ್ಪಾ ಅಪ್ಪಾ" ಎಂಬ ಆವೇಗದ ಮಾತು ಕೇಳಿಸಿತು. ಅವನು ಟೂರಿನ ಬಗ್ಗೆ ಎಷ್ಟು ಹಚ್ಚಿಕೊಂಡಿದ್ದಾನೆ, ಇನ್ನೂ ಬೆಳಗ್ಗೆ ಬೆಳಗ್ಗೆಯೇ ಕರೆಮಾಡಿದ್ದಾನಲ್ಲಾ, ಎಂಬ ಅಸಹನೆಯಿಂದಲೇ "ಹೇಳಪ್ಪಾ ನಿನ್ನ ಟೂರಿನ ಕತೆ" ಎಂದೆ. "ಅಯ್ಯೋ ಅಪ್ಪಾ ಅದಲ್ಲಾ ಕಣಪ್ಪಾ ಚಿನ್ನು ಕರು ಈಯುತ್ತಿದ್ದಾಳೆ ಕಣಪ್ಪಾ! ಅಂದ ಅವನ ಮಾತಿಗೆ ಒಮ್ಮಲೇ ದಡಕ್ಕನೇ ಎದ್ದು ಕುಳಿತೆ. ಅವನ ಲೈವ್ ಕಾಮೆಂಟರಿ ಶುರುವಾಗಿತ್ತು. ಕೇಳುತ್ತಾ ಹೋದೆ.

"ಅಪ್ಪಾ ಅಪ್ಪಾ ಸಣ್ಣ ಸಣ್ಣ ಕಾಲು ಆಚೆ ಬಂತೂ ಕಣಪ್ಪಾ. ವಾಹ್ ಅದರ ಕಾಲ ತುದಿ ಹರಿಶಿನದ ಬಣ್ಣ ಕಣಪ್ಪಾ! ಅದರ ಮೂತಿನೋ ಬಾಲನೋ ಗೊತ್ತಾಗ್ತಾ ಇಲ್ಲಾ ಕಣಪ್ಪಾ ಒಟ್ಟು ಕಪ್ಪು ಬಣ್ಣದ್ದು ಈಚೆ ಬರ್ತಿದೆ. ಓ ಅದು ಅದರ ಮೂತಿ ಕಣಪ್ಪಾ. ಕಣ್ಣು ಬಾಯಿ ಕಿವಿ ಎಲ್ಲಾ ಕಾಣಿಸ್ತು" ಅಂತಿದ್ದವನನ್ನು ನಿಲ್ಲಿಸಿ "ಅಲ್ಲಿ ಯಾರಿದ್ದಾರೆ ಮತ್ತೆ ಅಮ್ಮನ ಕೈಲಿ ಫೋನ್ ಕೊಡು" ಅಂದೆ. "ಅದೆಲ್ಲಾ ಆಗಲ್ಲಾ ಕಣಪ್ಪಾ ಯಾರೋ ಡೈರಿಯ ಡಾಕ್ಟರ್ ಅಂಕಲ್ ಬಂದಿದ್ದಾರೆ ಅವರೇ ಚಿನ್ನುಗೆ ಹೆರಿಗೆ ಮಾಡಿಸ್ತಿರೋದು. ಅಮ್ಮ ದೂರದಲ್ಲಿ ಇದೆ. ನಾನು ಮತ್ತೆ ನಕ್ಷತ್ರ ಇಬ್ಬರೂ ಮರ ಹತ್ತಿ ಕುಳಿತಿದ್ದೀವಿ ಕಣಪ್ಪಾ ಇಳಿದರೆ ಅಮ್ಮ ಬೈಯುತ್ತೆ" ಅಂದ.

"ಸರೀ ನೀನೇ ಕಾಮೆಂಟ್ರಿ ಮುಂದುವರಿಸು" ಎಂದೆ. "ಓ ಅದರ ಮೈ ಈಚೆ ಬಂತೂ, ಅದರ ಹಿಂಗಾಲು ಸಮೇತ ಆ ಹಾಲಿನ ಡೈರಿಯ ಅಂಕಲ್ ಕರೂನ ಹಿಡಿದುಕೊಂಡಿದ್ದಾರಪ್ಪಾ, ಚಿನ್ನು ಅದರ ಮೈಯೆಲ್ಲಾ ಮೂಸಿ ಮೂಸಿ ನೋಡ್ತಿದ್ದಾಳೆ. ಈಗ ಕರೂನ ಗೋಣೀ ಚೀಲದ ಮೇಲೆ ಮಲಗಿಸಿಬಿಟ್ಟರಪ್ಪಾ, ಅದು ಕಾಲ ಮೇಲೆ ನಿಲ್ಲೋಕೆ ಆಗ್ತಿಲ್ಲಾ ಕಣಪ್ಪಾ ಪಾಪದ್ದು" ಅಂದ. "ಸರೀ ಮೊದಲು ಹುಶಾರಾಗಿ ಮರ ಇಳಿದು ಅಮ್ಮನಿಗೆ ಫೋನ್ ಕೊಡು" ಎಂದೆ. "ಆಯ್ತು ಕಣಪ್ಪಾ ಬಟ್ ವೈಟ್ ಮಾಡಪ್ಪಾ ತುಂಬಾ ತುದಿಗೆ ಹತ್ತಿದ್ದೀನಿ ಸರೀಗೆ ಕಾಣಲ್ಲಾಂತ" ಅಂದವನನ್ನು ಮನಸ್ಸಿನಲ್ಲೇ ಬೈಕೊಳ್ಳುತ್ತಾ ಅವಳು ಮಾತನಾಡುವುದನ್ನೇ ಕಾಯುತ್ತಿದ್ದೆ. "ತಗೋಳಮ್ಮಾ ಅಪ್ಪಾ ಲೈನಲ್ಲಿದ್ದಾರೆ" ಎಂದ ಅವನ ಮಾತಿಗೆ ಬೆರಗಾದ ಅವಳು "ಓ ಮೈ ಗಾಡ್ ನೀನು ಮೊಬೈಲ್ ತೊಗೊಂಡು ಎಲ್ಲಿಗೆ ಹೋಗಿದ್ದೆ ಕೋತಿ, ನಾನು ಆವಾಗ್ಲಿಂದಾ ಹುಡುಕ್ತಿದ್ದೀನಿ ಅಪ್ಪನಿಗೆ ಫೋನ್ ಮಾಡೋಣಾ ಅಂತಾ" ಅಂದಿದ್ದು ಕೇಳಿತ್ತು.

ಫೋನ್ ಕೈಗೆ ಸಿಗುತ್ತಲೇ ಅವಳ ಖುಷಿಗೆ ಪಾರವೇ ಇಲ್ಲದೇ "ಬಾಬೂ ಕರು ಜೀವಂತ ಹುಟ್ಟಿದೆ, ನನ್ನ ಹರಕೆ ಫಲಿಸಿದೆ. ದಬ್ಬೇಘಟ್ಟದ ಕೆಂಪಮ್ಮನಿಗೆ ಹರಕೆ ಹೊರು, ಎಲ್ಲಾ ಸಲೀಸಾಗುತ್ತೆ ಅಂತಾ ಅವತ್ತು ಮಡಿವಾಳರ ಕೆಂಪಕ್ಕ, ಕುಂಬಾರ್ರ ದೊಡ್ಡಮ್ಮಜ್ಜಿ, ಜಯಣ್ಣಾರ ಬಸಮ್ಮ ಎಲ್ಲಾ ಸಜೆಸ್ಟ್ ಮಾಡಿದ್ರು. ನಾನೂ ಅವತ್ತು ಸದ್ಯ ಚಿನ್ನು ಉಳಿದರೆ ಸಾಕು ಅಂತಾ ಅವರು ಹೇಳಿದಂತೆಯೇ ಮನಸ್ಸಿನಲ್ಲೇ ಅಂದು ಕೊಂಡು, ಚಿನ್ನು ಮತ್ತು ಕರು ಜೀವ ಉಳಿಸಿಕೊಟ್ಟರೆ ಆ ಕರು ಅವಳಿಗೇ ಬಸವಿ ಬಿಡುತ್ತೇನೆ ಅಂತಾ ಹರಕೆ ಹೊತ್ತಿದ್ದೆ. ಕೊನೆಗೂ ದೇವರು ನಮ್ಮ ಕಡೆ ಇದ್ದಳು ಅಂತಾ ಸಾಕ್ಷಿ ಸಿಕ್ತಲ್ಲಾ. ಇಬ್ಬರೂ ಸೇಫಾಗಿದ್ದರೆ ಬಾಬೂ" ಅಂದು ಮಾತು ಮುಗಿಸಿದವಳಿಗೆ ನಾನು ಈಗ ತಾನೇ ಚಿಗುರೊಡೆದ ಕೊನೆಯ ಪ್ರಶ್ನೆ ಕೇಳುವವನಿದ್ದೆ.

ನಮ್ಮ ಮನೆಯ ಮೊಬೈಲು ಲೌಡ್ ಸ್ಪೀಕರ್ ಆನ್ ಇರೋದ್ರಿಂದಾ ನನ್ನಿಬ್ಬರೂ ಮಕ್ಕಳೂ ಜಗಳಾಡಿಕೊಂಡು ಅಮ್ಮನ ಬಳಿಗೆ ಬರುತ್ತಿದ್ದು ಕೇಳಿಸಿತ್ತು. ಮೊದಲನೆಯವನು "ನಾನು ಹೇಳಿದ್ದು, ಹೆಣ್ಣು ಕರು ಈಯ್ತಾಳೆ ಅಂತಾ! ನೀನು ತಾನೆ ಹೇಳೀದ್ದು ಗಂಡು ಕರು ಈಯುತ್ತಾಳೆ ಅಂತಾ. ನೋಡೀಗ ನನ್ನ ಗೆಸ್ಸೆ ಕರೆಕ್ಟು". ಅಂದದ್ದು ಕೇಳಿಸಿಕೊಂಡಿದ್ದ ಅವಳು ನೀನೇ ಕೇಳಪ್ಪಾ ನಿನ್ನ ಮುಂದಿನ ಪ್ರಶ್ನೆ ನಿನ್ನ ಮಕ್ಕಳೇ ಎಲ್ಲಾ ರೀಸರ್ಚ್ ಮಾಡಿಬಂದಿರೋರಥರಾ ಆಡ್ತಿದ್ದಾರೆ ಅಂದು ಮಕ್ಕಳ ಕೈಗೆ ಕೊಟ್ಟಳು. ಕೊನೆಯವನು ಹೇಳಿದ ಮಾತು ಕೇಳಿ ಹಾಲು ಸಕ್ಕರೆ ಕುಡಿದಂತಾಯ್ತು. ಅವಳು ಕೊನೆಗೂ ದೆಬ್ಬೇಘಟ್ಟದ ಕೆಂಪಮ್ಮನ ನೆಚ್ಚಿನ ಬಸವಿಯೇ ಆಗಿದ್ದಳು.

* * *

ಮುಂದಿನ ಮಾತು ಕಥೆಯೆಲ್ಲಾ ನಮ್ಮ ಮನೆಗೆ ಬಂದ ಹೊಸ ಹುಡುಗಿಗೆ ಯಾವ ಸೂಕ್ತ ಹೆಸರಿಡಬೇಕೆಂಬುದೇ ಆಗಿತ್ತು. ನಾನು ಇಬ್ಬರೂ ಮಕ್ಕಳನ್ನು ಕೇಳಿದೆ ಯಾವ ಹೆಸರು ಇಟ್ಟರೆ ಚೆಂದ ಅಂತಾ. ಮೊದಲನೆಯವನು ಹೇಳಿದ "ಅಪ್ಪಾ ಈ ಕರು ಬ್ರೌನ್ ಕಲರ್ ಇದೆ ಹಗಾಗಿ ಇವಳಿಗೆ "ಬ್ರೌನೀ" ಅಂದ್ರೆ ಹೇಗೆ" ಅಂದ. ಎರಡನೆಯವನು "ಅಪ್ಪಾ ಇದು ಎಚ್ ಎಫ್ ತಳಿ ಅಲ್ಲವಂತೆ, ಜೆರ್ಸಿ ತಳಿಯಂತೆ ಹಾಗಾಗಿ ಇವಳಿಗೆ "ಜೆರ್ಸೀ" ಅಂತಾನೇ ಇಟ್ಟರೆ ಹೇಗೆ" ಅಂದ. ನನಗೇಕೋ ಇಬ್ಬರು ಸೂಚಿಸಿದ ಹಸರುಗಳೂ ಸರೀ ಅನ್ನಿಸಲಿಲ್ಲಾ.
ಅವರಿಗೆ ಹೇಳಿದೆ "ಈಗ ಯಾವ ಹಬ್ಬ ಹತ್ತಿರ ಇದೆಯೋ ಅದರ ಹೆಸರು ಇಟ್ಟರೆ ಹೇಗೆ? ಎಂದೆ. "ವಾವ್ ಸೂಪರ್ ಅಂಡ್ ಸಿಂಪಲ್ ಐಡಿಯಾ ಕಣಪ್ಪಾ ನಿಂದೂ" ಅಂದರು ಮಕ್ಕಳಿಬ್ಬರೂ. ಎಣಿಸಿದರೆ ಕೆಲವೇ ಘಂಟೆಗಳಷ್ಟೇ ಬಾಕಿಯಿದ್ದ ಗೌರಿ ಗಣೇಶನ ಹಬ್ಬಕ್ಕೆ ಮುನ್ನ ನಮ್ಮ ಮನೆಗೆ, ಮನಸ್ಸಿಗೆ ಮತ್ತು ಚಿನ್ನುವಿಗೂ ಹೊಸ ಜನ್ಮವಿತ್ತು ಬಂದಿಳಿದ ಈ ಚೈತನ್ಯದಾಯಿನಿಗೆ, ಜೀವದಾಯಿನಿಗೆ "ಗೌರಿ"ಎಂಬ ಹೆಸರಲ್ಲದೇ ಇನ್ನಾವ ಹೆಸರೂ ಸೂಕ್ತವೆನ್ನಿಸಲಿಲ್ಲಾ.ನಮ್ಮ ಮನೆಯ ವರಾಂಡದಲ್ಲಿರುವ ಫೋಟೋವೊಂದರಲ್ಲಿ ಕಣ್ಣುಮುಚ್ಚಿ ಹಿಮಾಲಯದ ಬಳಿ

ಧ್ಯಾನಸ್ಥನಾದ ಜಗದೀಶನ ತೊಡೆಯೇರಿ ಕುಳಿತಿರುವ ಗೌರಿ, ಅವನ ತಲೆಯೇರಿ ಕುಳಿತಿರುವ ಗಂಗೆಯ ಚಿತ್ರಣ ಹಾಯ್ದು ಹೋಯ್ತು.ಮನದ ಮೂಲೆಯಲ್ಲೀ, ಯಾಕೋ, ಗೌರಿ, ಗಂಗೆ ಮತ್ತು ಜಗದೀಶ ಎಂಬ ಆ ಮುಕ್ಕಣ್ಣನ ಸಂಸಾರ ನೆನಪಾಗಿದ್ದು ಸುಳ್ಳಲ್ಲಾ. ಯಾಕಂತಾ ಗೊತ್ತಿಲ್ಲಾ!

ಮಕ್ಕಳು ಜೋರಾಗಿ "ವಾವ್ ವಾಟ್ ಎ ನೇಮ್? ಗೌರೀ ಗೌರೀ" ಎಂದು ಕೂಗುತ್ತಾ ಅವಳನ್ನು ಕ್ಲೀನ್ ಮಾಡುತ್ತಿದ್ದ ಡಾಕ್ಟರ್ ಗೆಳೆಯನ ಬಳಿಗೆ ಓಡಿದ್ದು ಮೊಬೈಲಲ್ಲೇ ಗೊತ್ತಾಯ್ತು.

## 15. A brief history of international women’s day

***- Rajesh S Mahantmath***



Long ago, in 1908 women working in garment factories in USA went on strike in protest against poor wages and working conditions. In honour of this strike probably the first ever in history, the Socialist Party of America organized the first ever National Women’s Day on 28 February, 1909. Later, in 1910 at the 2nd International Conference of Working Women in Copenhagen, Clara Zetkin, Leader of the Social Democratic Party of Germany tabled the idea of International Women’s Day which was unanimously approved by over 100 women from 17 different countries representing unions, socialist parties, working women’s clubs and the first three women elected to the Finnish parliament. The first International Women’s Day was observed on 19th March, 1911 in four countries: Austria, Denmark, Germany and Switzerland by more than one million people.

The idea behind observing International Women’s Day is to celebrate the economic, political and social achievements of women from past, present and future. This day also honours the work of “suffragates” (women who campaigned for the right to vote) who led by Sylvia Pankhurst conducted a protest march on 8 March,1914 in London and celebrates their success and reminds of inequities still to be released as regards women in societies all over the world. Since then every year International Women’s Day is celebrated on March 8 to commemorate this event.

At present International Women’s Day (IWD) is celebrated in most of the countries across the world including India. It is a national holiday for women in China, Russia, Vietnam, Bulgaria, Armenia, Azerbaijan, Madagascar and Nepal. On this day people honour their mothers, wives, colleagues and female relatives. In some countries it is celebrated as Mother’s Day and children give presents and gifts to their mothers and grandmothers.

Every year the UN declares a theme for IWD to focus global attention towards problems and issues concerning women. This year the UN theme for IWD 2015 is:

**“Empowering Women, Empowering Humanity: Picture it!”**


In the context of IWD it will be apt to reflect on the following quote by Swami Vivekananda:

*“It is impossible to think about the welfare of the world unless the condition of women is improved. It is impossible for a bird to fly on only one wing*.” — Swami Vivekananda

## 16. ಮುನ್ನುಡಿಯೇ ದಿಕ್ಸೂಚಿಯಾಗಲಿ

*– ಪುನೀತ್. ಎಸ್*

"ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ" ಬಂದಾಕ್ಷಣ ಎಲ್ಲರ ಬಾಯಲ್ಲೂ, ಪದಗಳಲ್ಲೂ ಸ್ತ್ರೀಶಕ್ತಿ ಜಾಗೃತವಾಗಿಬಿಡುತ್ತದೆ. ಒಂದು ಪಂಗಡದ ಜನರು ಸ್ತ್ರೀ ಸಬಲೀಕರಣದ ವಿರೋಧಿಗಳು, ಇನ್ನು ಕೆಲವರು ನಿಜವಾದ ಮಹಿಳಾ ಸಬಲೀಕರಣಕ್ಕೆ ಸುಪ್ತ ಮನಸ್ಸಿನಿಂದ ಓಗೊಡುವವರು, ಇನ್ನು ಕೆಲವರು ಚಟಕ್ಕಾಗಿ ಭಾಷಣಗಳಲ್ಲಿ ಪತ್ರಿಕೆಗಳಲ್ಲಿ ತಮ್ಮ ದೊಡ್ಡತನದಿಂದ ಸಮಸ್ತ ಜನತೆಗೆ ಸಲಹೆ ನೀಡುವವರು, ಇನ್ನು ಕೆಲವರು "ನಮ್ ಹೊಟ್ಟೆ ನಮ್ ಬಟ್ಟೆ" ದೇಶೋದ್ಧಾರ ನಮ್ಗ್ಯಾಕ್ ಬೇಕು? ಎನ್ನುವವರು, ಇನ್ನು ಕೆಲವರು "ಎಲ್ಲಾ ದದ್ದುಆ ಹೊರಕ್ಕಾಕು" ಎಂಬ ನಾಣ್ಣುಡಿಯಂತೆ ತಮ್ಮ ಪರಿಧಿಯಲ್ಲಾಗುವ ಬದಲಾವಣೆಗಳನ್ನು ತರಲಿಚ್ಚಿಸುವವರು. ಈ ಎಲ್ಲಾ ಪಂಗಡಗಳಲ್ಲಿ ಗಂಡಸರೊಬ್ಬರೇ ಅಲ್ಲ, ಹೆಂಗಸರೂ ಇದ್ದಾರೆ. ಭಾರತದಂತಹ ದೇಶದಲ್ಲಿ ಮಹಿಳೆಯರನ್ನು ಮೂಲೆಗೆ ತಳ್ಳುವಲ್ಲಿ ಗಂಡಸರ ಜೊತೆಗೆ ಹೆಂಗಸರೂ ಯಶಸ್ವಿಯಾಗಿದ್ದಾರೆ.



ಭಾರತ ವಿಭಿನ್ನ ಸಂಸ್ಕೃತಿಯ ನಾಡು. ಪ್ರತಿ ಇಪ್ಪತ್ತು ಕಿಲೋಮೀಟರ್‌ಗೊಂದು ಸಾರಿ ನಮ್ಮ ಭಾಷೆ, ಜೀವನಶೈಲಿ, ಮನೆಮನೆಯಲ್ಲಿನ ಆಚಾರ ವಿಚಾರ ಬದಲಾಗುತ್ತದೆ. ಅದರ ಜೊತೆಗೆ ವಿಭಿನ್ನ ಧರ್ಮಗಳು, ಜಾತಿಗಳು, ಉಪಜಾತಿಗಳು ಇವುಗಳನ್ನು ಹೆಣೆದುಕೊಂಡಿವೆ. ಈ ನೈಸರ್ಗಿಕವಾಗಿ ಹೆಣೆದುಕೊಂಡಿರುವ ಸಸ್ಯವರ್ಗಕ್ಕೆ ಚರ್ಚ್ ಪಾದ್ರಿಗಳು, ದೇವಸ್ಥಾನದ ಸ್ವಾಮೀಜಿಗಳು, ಮಸ್ಜಿದ್‌ನ ಮುಲ್ಲಾಗಳು, ರಾಜಕಾರಿಣಿಗಳು, ಅವರೇ ನಿರ್ಧರಿಕೊಂಡಿರುವ ಧಾರ್ಮಿಕ ಗುರುಗಳು ವಿವಿಧ ರಾಸಾಯನಿಕಗಳನ್ನು ಸಿಂಪಡಿಸಿ ಬೆಳೆಸುತ್ತಿದ್ದಾರೆ. ಇಷ್ಟು ಸಂಕೀರ್ಣವಾದ ವ್ಯವಸ್ಥೆಯ ಮೂಲ ಬೇರು "ಹೆಣ್ಣು". ಈ ಹೆಣ್ಣನ್ನು ಸಬಲೀಕರಿಸುವುದು ಇನ್ನೂ ಸೂಕ್ಷ್ಮ ವಿಚಾರ.

ಕೆಲವು ಪೂರ್ವ ನಿರ್ಧರಿತ ಬುದ್ಧಿಜೀವಿಗಳು ಈ ಸೂಕ್ಷ್ಮ ವಿಚಾರವನ್ನು ಒಂದೇ ದಿನದಲ್ಲಿ ಬದಲಿಸುವ ಆತುರತೆಯಲ್ಲಿ ಸಮಾಜದ ಸ್ವಾಸ್ಥ್ಯ ಕದಡುವಲ್ಲಿ ಯಶಸ್ವಿಯಾಗುತ್ತದ್ದಾರೆಂದು ನನಗನಿಸುತ್ತದೆ. ಅವರಲ್ಲಿ ಕೆಲವರು ಮಹಿಳಾ ಸಬಲೀಕರಣವನ್ನು ಬೇರೆ ರೀತಿಯಲ್ಲೇ ಅರ್ಥಮಾಡಿಕೊಂಡು, ಸಮಾಜದ "ಮಹಿಳಾ ಸಬಲೀಕರಣದಲ್ಲಿ" ಮಾದರಿ ವ್ಯಕ್ತಿಯಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ. ಪ್ರತಿ ಜಿಲ್ಲೆಗಳಲ್ಲಿ ಪ್ರತಿ ತಿಂಗಳಿಗೆ ಐನೂರು ವಿವಾಹ ವಿಚ್ಛೇದನ ಕೇಸ್‌ಗಳು ದಾಖಲಾಗುತ್ತಿವೆ. ಎಲ್ಲಾ ದೇಶಗಳಿಗೆ ಹೋಲಿಸಿದರೆ ನಮ್ಮಲ್ಲಿ ಕೇಸ್‌ಗಳು ಕಡಿಮೆ ಇದ್ದರೂ, ಈ ಸಬಲೀಕರಣಕ್ಕೂ ವಿಚ್ಛೇದನಕ್ಕೂ ಸಂಬಂಧವಿದೆಯಾ ಎಂಬುದನ್ನು ತಿಳಿಯಬೇಕಾಗಿದೆ. ಸಬಲೀಕರಣದ ದಿಶೆಯು ಕಾಳ್ಗಿಚ್ಚಾಗದೆ, ಹಡಗನ್ನು ಮುನ್ನಡೆಸುವ ದಿಕ್ಸೂಚಿಯಾಗಬೇಕಿದೆ. ಒಂದೊಂದು ಭೌಗೋಳಿಕ ಪ್ರಾಂತ್ಯಕ್ಕೂ, ಒಂದೊಂದು ಸಂಸ್ಕೃತಿಗೂ, ಮಹಿಳಾ ಸಬಲೀಕರಣವನ್ನು ಒಂದೊಂದು ರೀತಿಯಲ್ಲಿ ವ್ಯಾಖ್ಯಾನಿಸಬಹುದು. "ಗಂಡು = ಹೆಣ್ಣು" ಇದನ್ನು ಗಣನೀಯವಾಗಿ ತೆಗೆದುಕೊಂಡಲ್ಲಿ ಸಮಾಜದ ಸ್ಥಿತಿ ಏನಾಗಬಹುದು? "=" ಚಿಹ್ನೆಯನ್ನು ಬರೀ ಸಮ ಚಿಹ್ನೆಯಾಗಿ ಮಾತ್ರ ನೋಡದೇ, ಅದಕ್ಕೆ ಗಂಡು ಮತ್ತು ಹೆಣ್ಣಿನ ಅದರದೇ ಆದ ಮಾನಸಿಕ ಮೌಲ್ಯಗಳನ್ನು ಬೆರೆಸಿದರೆ ಸಮಾಜದಲ್ಲಾಗುವ ಏರುಪೇರುಗಳನ್ನು ನಿಭಾಯಿಸಬಹುದೆನ್ನಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಮಹಿಳೆ ಒಂದಲ್ಲಾ ಒಂದು ತರಹದಲ್ಲಿ ಪೂರ್ಣ ಪ್ರಪಂಚಕ್ಕೆ ಕಾಲಿಟ್ಟಿದ್ದಾಳೆ. ಇಷ್ಟು ದಿನ ಕೆಲವೇ ಕೆಲಸಗಳಿಗೆ ಮೀಸಲಾಗಿದ್ದವಳು, ಎಲ್ಲಾ ಕೆಲಸಗಳಲ್ಲೂ ತನ್ನ ವರ್ಚಸ್ವೀ ಸಾಮರ್ಥ್ಯವನ್ನು ತೋರಿಸಿದ್ದಾಳೆ. ಮನೆಯ ಒಳಗೆ ಮತ್ತು ಹೊರಗೆ ಎರಡೂ ಕೆಲಸಗಳು ತುಂಬಾ ಪ್ರಮುಖವಾದವು. ಇವತ್ತಿನ ಎಲ್ಲಾ ಕೆಲಸಗಳಲ್ಲೂ ಸಮರ್ಥವಾಗಿ, ಅಚ್ಚುಕಟ್ಟಾಗಿ ನಿಭಾಯಿಸುವುದು ಬಹುಮುಖ್ಯ. ನಿಮಗೆಲ್ಲರಿಗೂ ತಿಳಿದಿರುವಂತೆ "ಅಚ್ಚುಕಟ್ಟಿನಲ್ಲಿ" ಪುರುಷನಿಗಿಂತ ಮಹಿಳೆಯರ ಪೌರುಷ ಹೆಚ್ಚು. ಕೆಲವು ಸಮೀಕ್ಷೆಗಳ ಪ್ರಕಾರ, ಇವೆರಡನ್ನೂ ಅಚ್ಚುಕಟ್ಟಾಗಿ, ಸಮರ್ಥವಾಗಿ ನಿರ್ವಹಿಸುವುದರಲ್ಲಿ ಮಧ್ಯಮ ವರ್ಗದ ಭಾರತೀಯ ಮಹಿಳೆಯು ಸಂಕಷ್ಟ ಎದುರಿಸುತ್ತಿದ್ದಾಳೆ ಎಂದು ಹೇಳುತ್ತಿವೆ. ಇತ್ತೀಚಿನ ಜೀವನಶೈಲಿ ಮತ್ತು ಹಳೆಯ ಸಂಸ್ಕೃತಿ ಇವೆರಡರ ಜಂಜಾಟದಲ್ಲಿ ಮಧ್ಯಮ ವರ್ಗದ ಮಹಿಳೆಯ ಮಾನಸಿಕ ಶಕ್ತಿ ಕುಂದುತ್ತಾ ಇದೆ. ಅತೀ ಶ್ರೀಮಂತರಲ್ಲಿ ಅಥವಾ ಅತೀ ಕಡುಬಡವರಲ್ಲಿ ಈ ಜಂಜಾಟಗಳು ಸಾಮಾನ್ಯವಾಗಿ ಕಂಡುಬರುತ್ತಿಲ್ಲ. ಈ ಮಧ್ಯಮವರ್ಗದ ಮಹಿಳೆಯರಲ್ಲಿ, ನನ್ನ ಸ್ನೇಹಿತರಿದ್ದಾರೆ, ಸಂಬಂಧಿಗಳಿದ್ದಾರೆ ಮತ್ತು ಅಪರಿಚಿತರಿದ್ದಾರೆ. ಈ ಎಲ್ಲರಿಗೂ ಕಛೇರಿಯಲ್ಲಾಗಿರಬಹುದು ಅಥವಾ ಮನೆಯಲ್ಲಾಗಿರಬಹುದು, ಸಮಾಜವು "ಮಹಿಳಾ ಸಬಲೀಕರಣದ" ಉಚಿತ ಸಲಹೆ ನೀಡದೇ, ತಮ್ಮ ಕೈಲಾದ ನೈತಿಕ ಬೆಂಬಲ ನೀಡಿದರೆ "ಸಬಲೀಕರಣ" ಪುಸ್ತಕಕ್ಕೆ ಮುನ್ನುಡಿ ಬರೆದಂತಾಗುತ್ತದೆ.

"ನೈತಿಕವಾಗಿ ಬೆಂಬಲಿಸದಿದ್ದರೂ ಪರ್ವಾಗಿಲ್ಲ............ ದಾರಿತಪ್ಪಿಸಬೇಡಿ"

## 17. ಛಲವೊಂದಿದ್ದರೆ.........

– *ದಿವಾಕರ.ಕೆ*



ಓದಲಿಕ್ಕೆಂದು ಲೇಡಿಸ್ ಹಾಸ್ಟಲ್‌ಗೆ ಸೇರಿದ ಮೇಲೆ ರಜಾದಿನಗಳಲ್ಲಿ ಮಾತ್ರ ಊರಿಗೆ ಬಂದು ಹೋಗುತ್ತಿದ್ದ ವರದಾ ಪೋಲಿಸ್ ಅಧಿಕಾರಿಯಾಗಿ ಊರಿಗೆ ಬಂದಾಗ ಜನರೆಲ್ಲರೂ ಆಶ್ಚರ್ಯಚಕಿತರಾಗಿದ್ದರು ವರದಾ ಅತ್ಯಂತ ಕಡುಬಡತನದ ಕುಟುಂಬದಲ್ಲಿ ಹುಟ್ಟಿ ಬೆಳೆದಿದ್ದರಿಂದ ಬಡತನದ ಅರಿವು ಅವಳಿಗೆ ಚೆನ್ನಾಗಿ ತಿಳಿದಿತ್ತು. ತಾನು ಚೆನ್ನಾಗಿ ಓದಿ ಉತ್ತಮ ಉದ್ಯೋಗ ಪಡೆದು ತನ್ನ ತಂದೆ ತಾಯಿಗಳನ್ನು ನೋಡಿಕೊಳ್ಳಬೇಕೆಂಬ ಆಸೆಯು ಅವಳದಾಗಿತ್ತು. ಏಕೆಂದರೆ, ಅವಳ ತಂದೆ ತಾಯಿ ತುಂಬಾ ಕಷ್ಟಪಟ್ಟು ಅವಳನ್ನು ಸಾಕಿದ್ದರು. ವರದಾ ಶಾಲೆಗೆ ಹೋಗುವಾಗ ಎಲ್ಲಾ ಮಕ್ಕಳಿಗಿಂತ ಚುರುಕಾಗಿದ್ದಳು. ಅಷ್ಟೇ ತುಂಟಿಯು ಆಗಿದ್ದಳು. ಅಂತಹ ಹುಡುಗಿ ಈಗ ಅಧಿಕಾರಿಯಾಗಿ ಊರಿಗೆ ಬಂದಾಗ ಆ ಊರಿನ ಜನರಿಗೆ ಸಂತೋಷವೂ, ಆಶ್ಚರ್ಯವೂ ಆಗದೆ ಇರುತ್ತದೆಯೇ?

ವರದಾ ಬಾಲ್ಯದಲ್ಲಿ ಬಹಳ ಧೈರ್ಯವಂತೆ ಹುಡುಗಿಯಾಗಿದ್ದಳು. ಗ್ರಾಮೀಣ ಆಟಗಳಲ್ಲಿ ಗೆಲ್ಲಲೇಬೇಕೆಂಬ ಛಲವೂ ಅವಳಲ್ಲಿರುತ್ತಿತ್ತು. ಹೂವು, ಹಣ್ಣುಗಳನ್ನು ಕೀಳಲು ಮಲ್ಲಿಗೆ, ಸಂಪಿಗೆ, ಮಾವು ಮತ್ತು ಹಲಸಿನ ಮರಗಳನ್ನು ಯಾವುದೇ ಅಡೆತಡೆಗಳಿಲ್ಲದೆ ಹತ್ತಿಬಿಡುತ್ತಿದ್ದಳು. ಒಮ್ಮೆ ಸಂಪಿಗೆ ಮರವನ್ನೇರಿ ಹೂವುಗಳನ್ನು ಕೊಯ್ಯುವಾಗ ಆ ಮರದ ಯಜಮಾನ ಸೋಮಣ್ಣ 'ಏ ಗಂಡುಬೀರಿ, ನಮ್ಮನೆ ಸಂಪಿಗೆ ಮರದಲ್ಲಿ ಹೂವ ಕೊಯ್ಯಲಿಕ್ಕೆ ನಿನಗೆ ಯಾರು ಹೇಳಿದ್ದು' ಎಂದು ಗದರಿಸಿದ್ದ. ಅದಕ್ಕೆ ವರದಾ 'ಸಂಪಿಗೆ ಮರ ನಿನ್ನದಾಗಿರಬಹುದು. ಆದರೆ ಹೂವು ನಿನ್ನದೇ?' ಎಂದು ಕೇಳಿಯೇಬಿಟ್ಟಿದ್ದಳು. ಅದಕ್ಕೆ ಸೊಮಣ್ಣ 'ನೀನಿನ್ನು ಚಿಕ್ಕ ಹುಡುಗಿ, ಮುಂದೆ ಗಂಡನ ಮನೆಗೆ ಹೋಗಿ ಜೀವನ ನಡೆಸೋಳು, ಅದು ಹ್ಯಾಂಗೆ ಬದುಕ್ತಿಯೋ?'ಅಂತ ಹೇಳಿದ್ದ. 'ಹ್ಯಾಂಗದರೂ ಬದುಕ್ತೀನಿ ನನ್ನ ಜೀವನದ ಬಗ್ಗೆ ಕೇಳೋಕೆ ನೀನಾರು? ಅಂತ ವರದಾ ಜವಾಬು ನೀಡಿದ್ದಳು.

ವರದಾ ಶಾಲೆಗೆ ಹೋಗುವಾಗ ಅವಳಿಗೆ ಬರೆಯಲು ಪಾಠಿಯಾಗಲಿ, ಬಳಪವಾಗಲಿ ಇರುತ್ತಿರಲಿಲ್ಲ. ಹೂವುಗಳನ್ನು ಮಾರಿ ಅದರಿಂದ ಬಂದ ದುಡ್ಡಿನಿಂದ ಪಾಠಿಯನ್ನು, ಪುಸ್ತಕವನ್ನು, ಬಳಪವನ್ನು ಅಂಗಡಿಯಿಂದ ಕೊಳ್ಳುತ್ತಿದ್ದಳು. ಅದಕ್ಕೋಸ್ಕರವಾಗಿ ಅವಳು ಪ್ರತಿನಿತ್ಯ ಹೂವುಗಳನ್ನು ಕಿತ್ತು ಮಾಲೆಮಾಡಿ ಮಾರುತ್ತಿದ್ದಳು. ಹೂವುಗಳನ್ನು ಕೀಳುವ ಆತುರದಲ್ಲಿ ರಭಸದಿಂದ ಮರವನ್ನೇರಿ ಆಯತಪ್ಪಿ ಬಿದ್ದು ಕೈ ಕಾಲುಗಳಿಗೆ ಗಾಯ ಮಾಡಿಕೊಂಡಿದ್ದು ಉಂಟು. ಮನೆಯ ಮುಂದೆ ವಿವಿಧ ರೀತಿಯ ಹೂವಿನ ಗಿಡಗಳನ್ನು ನೆಟ್ಟು ನೀರೆರೆದು ಪೋಷಿಸಿದ ಉದ್ಯಾನವನವು ನೋಡುಗರ ಕಣ್ಣಿಗೆ ಸೊಗಸಾಗಿಯೇ ಕಾಣುತ್ತಿತ್ತು.

ತನ್ನ ಗೆಳೆಯರ ಜೊತೆ ಸೇರಿ ಲಗೋರಿ, ಮರಕೋತಿಯಾಟ, ಕುಂಟಪಿಲ್ಲಿ, ಕಳ್ಳ ಪೋಲಿಸ್ ಮುಂತಾದ ಆಟಗಳನ್ನು ಆಡುವಾಗ ಮೇಲು ಕೀಳು ಎಂಬ ಭೇದಭಾವವಿಲ್ಲದೆ ಎಲ್ಲರೊಂದಿಗೂ ಬೆರೆಯುತ್ತಿದ್ದಳು. ಜಾತಿಯಾಗಲೀ, ಧರ್ಮವಾಗಲೀ ಅವಳಿಗೆ ಯಾವಾಗಲೂ ಅಡ್ಡಿ ಬರಲೇ ಇಲ್ಲ. ಇದನ್ನು ಸಹಿಸಲಾರದೇ ರಾಜಣ್ಣ 'ಏ ಹುಡುಗಿ ನೀನು ಮಾಡ್ತ ಇರೋದು ಸರಿಯಿಲ್ಲ. ಕೀಳು ಜಾತಿಯವರೊಂದಿಗೆ ಬೆರೆಯೋದು ನಮ್ಮೂರಿನವರಿಗೆ ಸ್ವಲ್ಪವೂ ಇಷ್ಟವಿಲ್ಲ. ತಗ್ಗಿ ಬಗ್ಗಿ ನಡೆಯೋದು ಒಳ್ಳೆಯದು'ಅಂತ ವರದಾಳಿಗೆ ಪ್ರಶ್ನಿಸಿದ್ದ. ಅದಕ್ಕೆ ವರದಾ ರಾಜಣ್ಣ 'ಎಲ್ಲರ ಮೈಯಲ್ಲಿ ಹರಿಯೋದು ರಕ್ತ ಕಣೋ' ಯಾರು ಜಾತಿಯಲ್ಲಿ ಮೇಲೂ ಇಲ್ಲ, ಕೀಳು ಇಲ್ಲ, ಅಂತ ಕೇಳಿದ್ದಳು.

ಕಾಲೇಜು ದಿನಗಳಲ್ಲಿ ಅವಳ ವಿದ್ಯಾಭ್ಯಾಸವು ಮುಳ್ಳಿನ ಮೇಲೆಯೇ ನಡೆದ ಹಾಗೆಯೇ ಕಷ್ಟಕರವಾಗಿತ್ತು. ಕಿತ್ತುತಿನ್ನುವ ಬಡತನ ಒಂದು ಕಡೆಯಾದರೆ ದೀರ್ಘಕಾಲದ ಕ್ಷಯ ರೋಗದಿಂದ ಅವಳ ತಾಯಿಯು ಬಳಲುತಿದ್ದುದು ಮತ್ತೊಂದು ಕಡೆಯಾಗಿತ್ತು. ಈಗ ಓದುವುದರ ಜೊತೆಗೆ ಮನೆಯ ನಿರ್ವಹಣೆ ಅವಳ ಹೆಗಲ ಮೇಲೆ ಬಿದ್ದಿತ್ತು. ಇದರಿಂದ ದಿಕ್ಕು ತೋಚದೆ ವರದಾ ತನ್ನ ಓದನ್ನು ನಿಲ್ಲಿಸಬೇಕೆಂದು ತೀರ್ಮಾನಿಸಿದ್ದಳು. ಬೇರೆ ವಿಧಿಯಿಲ್ಲದೆ ದ್ವಿತೀಯ ಪಿ.ಯು.ಸಿಯ ನಂತರ ಒಂದು ವರ್ಷ ಮನೆಯಲ್ಲಿಯೇ ತನ್ನ ತಾಯಿಯ ಆರೈಕೆಯನ್ನು ಮಾಡಿದಳು. ಆಗಾಗ ಊರಿನಲ್ಲಿರುವ ಚಿಕ್ಕ ಗ್ರಂಥಾಲಯಕ್ಕೆ ಹೋಗುವುದನ್ನು ಬಿಡದೆ ದಿನಪತ್ರಿಕೆಗಳನ್ನು ಓದಿ ಸುದ್ದಿ ಸಮಾಚಾರಗಳನ್ನು ತಿಳಿದುಕೊಳ್ಳುತ್ತಿದ್ದಳು. ಇದೇ ಅವಳಿಗೆ ಪ್ರೇರಣೆಯಾಗಿರಬೇಕು. ಈ ಚಟುವಟಿಕೆಯು ಅವಳ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಹಾಯ ಮಾಡಿರಬೇಕು. ಮತ್ತೆ ಅವಳಿಗೆ ಕಾಲೇಜಿಗೆ ಸೇರಿಕೊಳ್ಳಬೇಕೆಂಬ ಆಸೆಯೂ ಆಗಿತ್ತು. ಒಂದು ವರ್ಷದ ನಂತರ ಒಳ್ಳೆಯ ಚಿಕಿತ್ಸೆ ಪಡೆದ ನಂತರ ತಾಯಿಯ ಆರೋಗ್ಯವೂ ಸುಧಾರಿಸಿತ್ತು. ಹಾಗಾಗಿ ಮುಂದಿನ ಓದಿಗಾಗಿ ವರದಾ ಹಾಸ್ಟೆಲ್ ಸೇರಿ ಡಿಗ್ರಿ ಮುಗಿಸಿದ್ದಳು. ವಿದ್ಯಾಭ್ಯಾಸದ ನಂತರ ಉದ್ಯೋಗದ ಹುಡುಕಾಟದಲ್ಲಿದ್ದ ವರದಾ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಪೋಲಿಸ್ ಇಲಾಖೆಯಲ್ಲಿ ಎಸ್. ಐ ಆಗಿ ನೇಮಕವೂ ಆಗಿದ್ದಳು. ಆಗ ಕಳ್ಳ ಪೋಲಿಸ್ ಆಟ ಅವಳಿಗೆ ನೆನಪಾಗುತ್ತಿತ್ತು. ಹೆಣ್ಣಾದರೇನು? ಛಲವೊಂದಿದ್ದರೆ ಏನಾದರೂ ಸಾಧಿಸಬಹುದಲ್ಲವೇ?

## 18. Salutation to Womanhood

**- B. Rama Devi**

**"Empowering Women, Empowering Humanity: Picture it!"**
The ability to nurture life makes woman the most powerful and strongest being. 'Woman'/ Women- is a word that invokes up a lot of images in our minds and brings out varied emotions like selfless love and sacrifice, nurturing and caring attitude**.** A woman is much more than these words……

**W: Wonderful in nature**
**O: Organized in work**
**M: Meticulous in planning**
**A: Adorable**
**E: Energetic in all walks of life**
**N: Noble in thoughts and deeds**

She can play different roles with ease be it that of a caring mother, loving wife, doting daughter, an adoring sister, a powerful politician, dutiful doctor, marvelous scientist, dynamic manager etc etc … you name it and she does it. She is the real superstar in all walks of life. Whatever be the role, she does with perfection and within her is the power to create, nurture and transform.

But, women down the ages were not given their due respect yet they went on without complaints and still could bring a change. Women fought against all odds to emerge as a winner. History is replete with examples of courageous women like Mother Theresa, Rani Lakshmibai, Indira Gandhi, Hellen Keller, Mary Kom, Malala Yousafzai and so on.

Women now are more empowered and aware of their rights and the society has accepted their stand. The society is changing and paving way for the growth of the women. The changes can be seen in the fields of education, healthcare, equality and job opportunity. The new decade has seen a marked change in attitude towards women at large. Women have made strides in every field, even in the male dominant fields too.

This is the time to uphold women's achievements, recognize challenges, and focus greater attention on women's rights and gender equality to mobilize all people to do their part. The society has to focus on critical areas of concern, and envisions a world where each woman and girl can exercise her choices, and living in a society free from violence and discrimination. She needs to be unbounded from all social and cultural superstitious liabilities.

For the gentle hand that rocks the cradle, and the strong mind that rules the world, ritualistically we may celebrate a single day as Woman's day, but this is the need for the hour as it is time for introspection and this is not just another day. It is a day to appreciate and give respect to all the women who are the essence of our lives and is a day to honour the life, perseverance and determination of women.

**On occasion of the Women's day Standing salutation with dedication to all the Women in my life and also to all the Anganwadi teachers, WCWD officials we are associated with.**

## 19. Cool Clicks: Anil Kudambal



**: Bayalu Coordinators :**

***Gulbarga: Maihili R:*** **maithili.r@azimpremjifoundation.org**

***Mandya: Divakara K:*** **divakara.k@azimpremjifoundation.org**

***Bangalore: B Ramachandara Bhat:*** **brbhat@azimpremjifoundation.org**

***Yadgir: Shadakshari T S:*** **shadakshari.ts@azimpremjifoundation.org**